# ಜೇನಾಗುವಾ

## ಜೇನಾಗುವಾ!

ನಾ ನಿನಗೆ ನೀನೆನಗೆ ಜೇನಾಗುವಾ!
ರಸ ದೇವಗಂಗೆಯಲಿ ಮೀನಾಗುವಾ!
ಹೂವಾಗುವಾ ಹಣ್ಣಾಗುವಾ
ರತಿರೂಪಿ ಭಗವತಿಗೆ ಮುಡಿಪಾಗುವಾ!

ಶಿವನೆನ್ನ ಸುಖಕೆ ಸುಖಿ;
ಶಿವೆ ನಿನ್ನ ಸುಖಕೆ ಸುಖಿ;
ಶಿವಶಿವೆಯರಾ ಸುಖವ
ಸವಿವಖಿಲ ಲೋಕ ಸುಖಿ!
ಬಾ ಬಾರ, ಬಾರ, ಸಖಿ,
ನಾ ನಿನಗೆ ನೀನೆನಗೆ ಜೇನಾಗುವಾ!
ರಸ ದೇವಗಂಗೆಯಲಿ ಮೀನಾಗುವಾ!

ಬಿಂಬ ಚುಂಬನ ರಸದ
ಅಗ್ನಿ ಆನಂದದಲಿ
ಕರಗೆ ಕೈಲಾಸ,
ವಕ್ಷದಾಲಿಂಗನದ
ಇಕ್ಷುಪೀಡನಕುಣ್ಣೆ
ಕ್ಷೀರೋಧಿಹಾಸ,
ಚಂದ್ರಮಂಟಪದಲ್ಲಿ
ಇಂದ್ರ ಇಂದ್ರಯಕುದಿಸೆ
ಭೋಗ ಸಂತ್ರಾಸ,
ಗಂಗೆಯಮುನೆಯ ತೊಡೆಯ
ತುಂಗಭದ್ರೆಗೆ ಮೂಡೆ
ತೀರ್ಥ ನಿಃಶ್ವಾಸ,

ಬಾ ಬಾರ, ಬಾರ ಸಖಿ,
ನಾ ನಿನಗೆ ನೀನೆನಗೆ ಜೇನಾಗುವಾ!
ರಸದೇವಗಂಗೆಯಲಿ ಮೀನಾಗುವಾ!

ರಾಮಚಂದ್ರನ ಮನದ
ಮಾದೇವಿ ಸೀತೆ,
ಪುಂಡರೀಕನ ಪಡೆದ
ಶ್ರೀ ಮಹಾಶ್ವೇತೆ
ತಮ್ಮ ಹರಕೆಯನೊಸಗೆಮಂಚವಝು ಮಾಡಿ,
ವಿರಹದುದಿರಿಯನು ಕುದಿಸಿ
ಹಾಲು ಪುಣ್ಯವ ಹಾಸಿ,
ಹೂವು ಸುಖವನೆ ಹೊದಿಸಿ
ಮಿಲನ ಮಧುವನು ಸೂಸಿ,
ಕರುಣಿಸಲಿ ಕೃಪೆಮಾಡಿ
ತಮ್ಮ ನೋಂಪಿಯ ಸುಧಾರಕ್ಷೆ ನೀಡಿ!
ಬಾ ಬಾರ, ಬಾರ ಸಖಿ,
ನಾ ನಿನಗೆ ನೀನೆನಗೆ ಜೇನಾಗುವಾ!
ರಸದೇವಗಂಗೆಯಲಿ ಮೀನಾಗುವಾ!

## ಸಂಸಾರಿಯಾಗಲಿರುವ ಬ್ರಹ್ಮಚಾರಿಯ ಪ್ರಾರ್ಥನೆ

ವಂದಿಸುವೆ ಚರಣಾರವಿಂದಕ್ಕೆ ಮುಡಿಯಿಟ್ಟು:
ಇಂದು ಆಶೀರ್ವದಿಸು ಕಂದನನು, ಗುರುದೇವ;
ಮುಂದೆ ಬರುವಂದು ಸಂಸಾರಿ ನಾನು!
ಬಿದ್ದಂದು ಮೇಲೆತ್ತಿ, ನೆಚ್ಚಿತ್ತು, ಸಂತವಿಸಿ,
ಬ್ರಹ್ಮಚರ್ಯದೊಳೆಂತು ನಚ್ಚಿಂದೆ ಕಾಯ್ದಿಹೆಯೊ
ಅಂತೆ ಸಂಸಾರಿಯನು ಸಲಗು ನೀನು!

ನಲ್ಮೆಯಿಂದೆನ್ನ ನಲ್ಲೆಯ ಕೈಯ ಮೇಲುಪಿಂದೆ
ಪಿಡಿಯುತಾದರದಿ ನೋಯದವೋಲೆ ನಿನ್ನಡಿಗೆ
ನಮ್ಮೆದೆಗಳೊಂದೆಹೂ ಮುಡಿಪನಿಡುವೆ;
ಪ್ರೇಮನೈವೇದ್ಯವನೆ ಪೂಜೆಗೊಡುವೆ!
ಸರಸಮೋಹಕೆ ಮನವ ಮಾರಿ ನಿನ್ನನು ಮರೆತು
ಜಡಹೃದಯನಾಗದಂತೆನಗೆ ಕೃಪೆಗೈ, ಗುರುವೆ,
ಓ ಎನ್ನ ಜೀವನದ ಕಲ್ಪತರುವೆ!

ಆಶೀರ್ವದಿಸು ನನ್ನ ಈ ಬಯಕೆ ಕೈಗೂಡುವಂತೆ!
ಆಶಿರ್ವದಿಸು ನಮ್ಮಿರ್ವರೆದೆಗಳೊಂದಾಗುವಂತೆ!
ಆಶೀರ್ವದಿಸು ನಿನ್ನ ದಿವ್ಯೆಚ್ಛೆ ನಮತಾಗುವಂತೆ!

# ಜೇನಿರುಳು ಅಥವಾ ಪ್ರಥಮ ಮಿಲನ

ಮೊದಲನೆಯ ಮಿಲನವೇನ್?
ಅಹುದು ಈ ಜನ್ಮದಲಿ!
ಇಲ್ಲದಿರೆ, ಮರೆತ ಚಿರ ಪರಿಚಿತೆಯನಿನ್ನೊಮ್ಮೆ
ಇದಿರುಗೊಂಡಂತಾದುದೇಕೆ?-
ಜನ್ಮ ಜನ್ಮಾಂತರದ ನಲ್ಲೆಯಾಕೆ!

ಕುಳಿತು ಕಾಯುತ್ತಿದ್ದೆ ಗಗನದಂತೆ
ಪ್ರಣಯಿ ನಾನು;
ಕತ್ತಲೆಗೆ ಕೆಮ್ಮಿಂಚು ಬಳುಕಿ ಬರುವಂತೆ
ಬಂದೆ ನೀನು,
ಓ ನನ್ನ ಚಿರಪರಿಚಿತೆ!
ನೀ ನನ್ನ ಗುರುತಿಸಿದೆ;
ನಾ ನಿನ್ನ ಗುರುತಿಸಿದೆ;
ಕರಗಿದುದು ಬಹು ಜನ್ಮ ಕಾಲದೇಶದ ಹಿರಿಯ
ಕರಿಯ ಕಲ್ ಗೋಡೆ
ನಾ ನಿನ್ನ ನೀನೆನ್ನ ನೋಡೆ!
ಚೆಲುವೆ, ಶರಣಾದೆ ನೀನೆನ್ನನೊಪ್ಪಿ;
ಸಂಪೂರ್ಣನಾದೆ ನಾ ನಿನ್ನನಪ್ಪಿ!
ನಾನು ಮಾತಿನ ಹೊಳೆಯ ಹೊನಲಾಗಿ ಹರಿದೆ,
ಸವಿನುಡಿಯ ಮಳೆಯ ಕರೆದೆ;
ನೀನು ಮೌನದ ಬಂಡೆಯಂದದಲಿ ಕುಳಿತೆ
ನೀರ್ ನಡುವೆ ನಲ್ ಮೊರೆಯನಾಲಿಸುತ, ಓ ನನ್ನ ಲಲಿತೆ! – –
ಅಯ್ಯೊ ಆ ಜೇನಿರುಳು ಬೆಳಗಾದುದೇಕೆ?
ನಮ್ಮಿರ್ವರಾ ಬಿಗಿದ ನಲ್ಮೆತೋಳ್ ತಾವರೆಯ ಸೆರೆಗೆ
ಬಿಡುಗಡೆಯ ಹಾಳು ರವಿ ಉದಯಿಸಿದನೇಕೆ?

## ಒಲುಮೆಚೇಳು

ಒಲುಮೆಚೇಳು ಸಕ್ಕರೆಯದು
ಕಚ್ಚಿದರೂ ಅಲ್ಲ ಕಹಿ;
ಅದರ ಕೊಂಡಿ ಅಕ್ಕರೆಯದು
ಚುಚ್ಚಿದರೂ ಬೆಲ್ಲ ಸಿಹಿ!

## ನಖಕ್ಷತೇಂದು

ದಿವಾರಾತ್ರಿಗಳ ನವಾನುರಾಗದಾ
ಸಂಧ್ಯಾಭೋಗಿಯ ಭೋಗದಲಿ,
ನೋಡದೊ, ಮೋಡದ ತೆಳ್‌ದೆರೆ ಸೆರಗಿಂ
ನಾಚುತೆ ಮುಖಮುಚ್ಚುವ ಬಾನ್‌ಕನ್ನೆಯ
ಕೆನ್ನೆಯೊಳೆಸೆವನ್ ನಖಕ್ಷತೇಂದು
ಸಜ್ಜೆಯ ಲಜ್ಜಾಯೋಗದಲಿ!

## ನೀನಲ್ಲದ ಸೊಗಸಿಲ್ಲ

ನೀನಿತ್ತರೆ ಸವಿ ಎಲ್ಲ;
ನೀನೀಯದೆ ರುಚಿ ಇಲ್ಲ.
ನೀನಿರೆ ಬಳಿ ಜಗವೆಲ್ಲ
ಹಾಲ್, ಜೇನ್, ಸಕ್ಕರೆ, ಬೆಲ್ಲ. –
ನೀನಲ್ಲದ ಸೊಗಸಿಲ್ಲ!

## ನಿರ್ವಾಣ

ಹೂವಿನೆಸಳಿನ ಮೇಲೆ ಜಿಂಜೇನ ಹನಿಯಂತೆ
ಸಜ್ಜೆಯಲಿ ಪವಡಿಸಹಳೆನ್ನಿನಿಯ ಕಾಂತೆ;
ಕವಿಯ ಕಣ್ಣಿನ ಹಕ್ಕಿ ನಾಲಗೆಯ ನಡು ಚಾಚಿ
ನೆಕ್ಕಿ ನೊಣೆಯುತಿದೆ ನಿರ್ವಾಣಗೈವಂತೆ!

## ಕಂದನ ನಿದ್ದೆ - ತಂದೆಯ ಶ್ರದ್ಧೆ

ಸೋವಿಯಟ್ ಸೈನ್ಯಗಳ್ ನಾಜೀ ಪತಾಕಮಮ್
ಮುರಿಯುತಿವೆ ಖಾರ್ಕೋವಿನೊಳ್;
ಚೀಣಾ ಜಪಾನುಗಳ್ ಸಂಧಿಸಿವೆ ಬರ್ಮದೊಳ್
ಸಾವ್ ಬದುಕು ಸಂಗ್ರಾಮದೊಳ್.
ಅತ್ತಾ ಅಮೇರಿಕೆಯೊಳಾಯುಧಂಗಳ ಸೃಷ್ಟಿ;
ಇತ್ತ ಇಂಗ್ಲೆಂಡಿನೊಳ್ ಚರ್ಚಿಲ್ ವಚನ ವೃಷ್ಟಿ!

ಯುದ್ಧಸಿದ್ಧತೆಯುಳಿದ ಕರ್ಮಗಳಿಗಿಂದೆಲ್ಲಿ
ಬಹುಮಾನ ಬಿರುದುಗಳ ಬೆಲೆಯ ಮಾತು?
ಆದರೂ ಎದೆತಟ್ಟಿ ಹೇಳುವೆನು ನಾನಿಲ್ಲಿ: -
ನನ್ನ ಕೆಲಸಕೆ ಮಾತ್ರ ದೇವನೋತು
ಹರಸುವನು ಲೋಕವನು! ಕೆಲಸವೇನೆಂಬೆಯೇನ್?
ಒಂದು ವರುಷದ ಚೈತ್ರ, ನನ್ನೆಳೆಯನು,
ಮಲಗಿ ನಿದ್ರಿಸುತಿಹನು: ಪೀಡಿಸುವ ನೊಣಗಳನ್
ನಿದ್ದೆಗೆಡದಂತೆವೊಳ್ ಸೋವುತಿಹೆನು!

## ನವರಾತ್ರಿ ಗೊಂಬೆ

ನಮ್ಮ ಮನೆಯೊಳಗಿರವುದೊಂದೆ ಗೊಂಬೆ;
ನವರಾತ್ರಿಗೊಂಬೆ!
ಅದರ ಕಣ್ಣೊಳಗಿಹುದೊ ದೇವಲೋಕ;
ತೊದಲೊಳೊ ಅಶೋಕ!
ಅದರ ಜೇನ್ದುಟಿಯಿಂದಲಿಳಿವುದಮೃತ!
ಅದು ಒಪ್ಪದಿಹುದೆಲ್ಲ ಮಾಯೆ, ಅನೃತ!
ಅದರ ಸುಸ್ಮಿತ ನಮಗೆ ಸುಖಜೀವಿತ;
ಶುಶ್ರೂಷೆಯೇ ಸಕಲ ಪುಣ್ಯವ್ರತ!

ಅಳುವುದದು, ನಗುವುದದು, ಮೌನಿಯಲ್ಲ;
ಸುರಿವುದದು ಜೊಲ್ಲ!
ನುಡಿವುದದು ಕೈಲಾಸದವರ ಸೊಲ್ಲ;
ನಮಗರ್ಥವಲ್ಲ!
ನಮ್ಮ ಮನೆಗೆಂತು ಬಂತದುವೆ ಗುಟ್ಟು;
ದೇವರೂ ಹೇಳನಯ್ ಬಾಯಿ ಬಿಟ್ಟು!
ಒಲವಿಗಾನಂದವನು ತೊಟ್ಟುತೊಟ್ಟು
ಹೆಪ್ಪೆರೆದು, ಕಡೆದು, ಪಡೆದೆವೆನೆ 'ರಟ್ಟು'!

ಕಂಡ ಕಂಡರಿಗೆಲ್ಲ ಕರೆಯ ನೀಡಿ,
"ನೀವ್ ಬಂದು ನೋಡಿ"
ಎಂದದಕೆ ಬಣ್ಣಸಿಂಗಾರ ಮಾಡಿ
ತೋರ್ಪೆವೆನೆ, ಓಡಿ
ತಾಯ ಸೆರಗಿನ ಮರೆಗೆ ಹೆದರಿಹೊಕ್ಕು
"ನಿಮ್ಮ ಸುಖವನ್ನ ರೀಕ್ಷಿಸಲು ಮಿಕ್ಕು
ಸವಿಯಹುದೆ?" ಎಂದು ಮೂದಲಿಸಿ ನಕ್ಕು
ನಗಿಸುವುದು, ನಮ್ಮ ಅಲ್ಪತೆಯನೊಕ್ಕು!

ಆನೆ ಅಂಬಾರಿಗಳ ಮೇಲೆ ಏರಿ,
ಜನರೆಲ್ಲ ಸೇರಿ
ಕಿಕ್ಕಿರಿದು ತುಂಬಲಿಕ್ಕೆಲದ ದಾರಿ,
ಅರಸರ ಸವಾರಿ,
ಅಬ್ಬರಿಸೆ ತುತ್ತೂರಿ ಯದ್ಧಭೇರಿ
ಸೈನಿಕರ ಜಯಘೋಷ ಅಶ್ವಹೇಷ,
ಮೆರವಣಿಗೆ ಹೋಹ ನೋಟವನು ಮೀರಿ
ಮೆರೆವುದೀ ಕಂದನೊಡನಾಡುವಂದ!

## ಹೆಸರಿಟ್ಟು ಹರಸುವೆನು ಚೈತ್ರನಂ

ವ್ಯಾಸಪೂರ್ಣಿಮೆಯಿರುಳ ಕೊನೆಯ ಜಾವಂ ಜಗುಳಿ
ಜಾರುತಿದೆ. ವೈಶಾಖ ಶುದ್ಧದಂತ್ಯದ ರಜನಿ

ಸಾರುತಿದೆ ಪಶ್ಚಿಮಕೆ, ಪ್ರಾಗ್ ಜ್ಯೋತಿ ಭೀತಿಯಿಂ
ಪ್ರಾಚ್ಯಗಿರಿಯಂ ಪರಿತ್ಯಜಿಸಿ. ಮುಂಗಾರ್ ಮಳೆಗೆ
ಮಿಂದ ಮಲೆಬನಗಳಿಂದಲೆಯುತಿದೆ ಪೊಸಮಲರ
ಕಂಪಾಂತ ತಂಬೆಲರ ಸೊಂಪು. ಬೇಲಿಯ ಮೇಲೆ
ಮಲರ್ದ ಮಲ್ಲಿಗೆ ಹೊದರಿನಲ್ಲಿ ಮಡಿವಳ ಹಕ್ಕಿ
ತೊಡಗಿಹುದು ತನ್ನ ಸಿಳ್ ಸಂಗೀತಮಂ. ಜಗದ
ಜಡನಿದ್ದೆಯಂ ಬಡಿಯುತತೆಳ್ಚರಿಸುವಂತೆವೋಲ್
ಕ್ರೈಸ್ತ ದೇವಾಲಯದ ಗೋಪುರ ಬೃಹದ್ ಘಂಟೆ
ಘೋಷಿಸುತ್ತಿದೆ ಭವ್ಯಮಾಧುರ್ಯಮಂ. ಕಾಣ್
ವೈಶಾಖ ಬಹುಳದಾದಿಯ ದಿವಸದೇವನದೊ
ಮೆಲ್ಲನೆಯೆ ಕಣ್ದೆರೆಯುತಿಹನದ್ರಿ ಸಂಧಿಸುವ
ಆ ಐಂದ್ರವ್ಯೋಮದಲಿ.

ತೇಜಸ್ವಿ ಸೋದರನೆ,
ಹೇಮಾಂಗಿನಿಯ ತನೂಭವನೆ, ಹೇ ನನ್ನಾತ್ಮ
ನವ್ಯತಾ ದೇವತಾ ಪ್ರತ್ಯಕ್ಷರೂಪಿ, ಓ
ಕೋಕಿಲೋದಯ ಚೈತ್ರ, ಹರಸುವೆನು ಹೆಸರಿಟ್ಟು,
ಹೆಸರಿನ ಹಿರಿಮೆ ಉಸಿರಿಗೂ ಬರಲಿ ಎಂದೊಲಿದು
ಬಯಸಿ: - ತೊಟ್ಟಿಲಾಗಲಿ ನಿನಗೆ ಉಪನಿಷತ್ತಿನ
ದಿವ್ಯ ಸಂಸ್ಕೃತಿಯ ಋಷಿದರ್ಶನಂ, ಸಕಲ ಭೂ
ಭಾಗಗಳ ಮಾನವರ ಉದ್ಧಾರ ಸಾಹಸದ
ಶತಮಾನ ಕೃತಿಗಳ ತಪಃಫಲಂ ನಿನಗಕ್ಕೆ
ಸ್ತನ್ಯಪೀಯೂಷಪಾನಂ, ವಿಧ್ಯ ಸಹ್ಯಾದ್ರಿ
ಮಲಯಮಿತ್ಯಾದಿ ಪರ್ವತಂಗಳುಂ, ಜುಹ್ನುಜಾ
ಜಮುನಾದಿ ತುಂಗಭದ್ರಾ ತರಂಗಿಣಿಗಳುಂ
ನಿನಗಕ್ಕೆ ಭಾರತದ ಬಾಲ್ಯದಾಡುಂಬೊಲದ
ಸಂಗಾತಿಗಳ್, ಸರ್ವಲೋಕ ಶೈಲೇಶ್ವರಂ
ನಿನಗಕ್ಕೆ ತಾಂ ಪ್ರತಿಸ್ಪರ್ಧಿ, ಹೈಮಾಚಲಂ,
ಧವಳಗಿರಿ ಶಿರವರೇಣ್ಯಂ, ಮಾನಸ, ಸರೋ-
ಜನ್ಮ ಮಹಿಮಂ! ಶ್ವಾಸಕೋಶಗಳಕ್ಕೆ ನಿನಗೆ
ಸಾಗರಾಕಾಶಗಳ್!

ಶಂಕರ ಶ್ರೀಬುದ್ಧಿ,
ರಾಮಾನುಜನ ಹೃದಯ ಕ್ರಿಸ್ಥ ಬುದ್ಧರ ಮಹಾ
ಸಾತ್ವಿಕ ಕೃಪಾ ಸ್ಥೈರ್ಯ, ಗಾಂಧಿಯ ದಯಾ ಧೈರ್ಯ,
ಶ್ರೀರಾಮಕೃಷ್ಣ ಮೇಣ್ ವಿವೇಕಾನಂದರಾ
ಧರ್ಮದೌದಾರ್ಯಾದಿ ಸರ್ವಶ್ರೇಯಂಗಳುಂ
ಬಂದು ಹರಸಲಿ ನಿನ್ನನೆನ್ನ ಕಂದಾ! ವ್ಯಾಸ
ವಾಲ್ಮೀಕಿ ಮೊದಲಪ್ಪ ಕವಿವರೇಣ್ಯರ್ ಬಂದು
ಸಿಂಚಿಸಲಿ ಪ್ರತಿಭಾ ಕವಂಡಲುಗಳಿಂ ತಂತಮ್ಮ
ಕಾವ್ಯ ಕೃಪೆಯಂ! ನಿಖಿಲ ಭುವನ ಶ್ರೇಷ್ಠ ಗಾಯಕರ್
ಶಿಲ್ಪಿಗಳ್ ವರ್ಣಶಿಲ್ಪಿಗಳೆಲ್ಲರೈತಂದು
ತಂತಮ್ಮ ದಿವ್ಯಕಲೆಯಂ ಪ್ರಚೋದಿಸಲಿ ಮೇಣ್
ಪ್ರಿಯದಿಂ ಪ್ರತಿಷ್ಠಿಸಲಿ ಈ ನನ್ನ ಚಿಣ್ಣನೀ
ಕೋಕಿಲೋದಯ ಚೈತ್ರನಾತ್ಮಮಂದಿರದಮೃತ
ಪೀಠದಲಿ!

ಈ ಹರಕೆಗಿಂ ಮಿಗಿಲ್ ಹಿರಿಹರಕೆ
ಇರ್ಪೊಡಾ ಹರಕೆಯಿಂ ಯೋಗ ದಿವ್ಯಜ್ಞಾನಿ
ಜಗದೀಶ್ವರಗೆ ಬಿಡುವೆನೈ; ಬೇಡಿಕೊಳ್, ಕಂದಾ!

ನೀನ್ ಬಂದ ಈ ಜಗಂ ನೀನ್ ಬಿಡುವ ಆ ಜಗಕೆ
ಕೀಳಾಗುವಂತೆ ಬಾಳ್: ಇಂದಲ್ಲಿ, ಪಶ್ಚಿಮದಿ
ಮಾನವೀಯತೆ ಮಾಣ್ದು ತಾಂಡವಂಗೈಯುತಿದೆ
ನೀಚ ರಾಕ್ಷಸತೆ, ಯಾಂತ್ರಿಕ ಕ್ರೌರ್ಯದಾ ರುದ್ರ
ರಣದಲ್ಲಿ. ಪೆಣ್ಗಳಂ ಮಕ್ಕಳಂ ಬಲಿಗೆಯ್ದು
ತಣಿಸುತಿರುವರು ಸಮರಚಂಡಿಯಂ. ಸೆಣಸುತಿವೆ
ಹಣೆಗೆ ಹಣೆ ಘಟ್ಟಿಸುತ್ತೆರಡು ದುಶ್ಶಕ್ತಿಗಳ್
ಲೋಕ ಚಕ್ರಾಧಿಪತ್ಯಕ್ಕೆ. ಆ ದುಷ್ಕರ್ಮ
ಶಕ್ತಿದ್ವಯಂಗಳುಂ ಹೇಳ ಹೆಸರಿಲ್ಲದೆಯೆ

ಒಂದರಿಂದೊಂದಳಿದು ಶೋಕವೊಂದುಳಿಯಲಾ
ಶೋಕಕೊಂದೊಳ್ಪಿನಾಕಾರಮಂ ನೀಡಲ್ಕೆ
ನೀಂ ಸತ್ಕೃತಿಯ ಲಸಚ್ಛಲ್ಪಿವರನಗೆಂದು
ಹರಸುವೆನು; ಹರಸುವೆನೊ ಗುರದೇವನಂ ನುತಿಸಿ; ಮೇಣ್

ನನ್ನನಾಶೀರ್ವದಿಸಿ ಗೃಹಸ್ಥಾಶ್ರಮಕ್ಕೊಯ್ದು,
ಧರ್ಮದೌದಾರ್ಯಮಂ ಪೇಳ್ದೆ ಪಶ್ಚಿಮಕೆಯ್ದಿ,
ಐರೋಪ್ಯ ಯುದ್ಧದಾ ಕ್ರೌರ್ಯ ಭೂಮಿಯೊಳಿರ್ಪ
ನನ್ನ ಆ ಸಿದ್ಧೇಶ್ವರಾನಂದ ಸ್ವಾಮಿಜಿಗೆ
ಸುಕ್ಷೇಮಮಕ್ಕೆಂದು ಬಯಸಿ ನಲ್ಬಯಕೆಯಂ!

## ಕೋಕಿಲೋದಯ ಚೈತ್ರ

ಬಂದನಿದೊ ಕೋಕಿಲೋಲ್ಲಾಸ ಚೈತ್ರಂ, ಕವಿಯ
ಜೀವನ ಸುಖ ವಹಿತ್ರಂ. ಆಗಮನ ಸಂಭ್ರಮಕೆ
ಸಮೆದಿಹಳ್ ಲೋಕಮಾತೆಯೆ ವಸಂತೋದಾರ
ಸಹ್ಯಸೀಮೆಯ ವಿಪಿನರಂಗಮಂ. ಸುಡುವಿಸಿಲ್
ತವಿದಿಹುದು ಮೊದಲ ಮುಂಗಾರ್ಮಳೆಯ ಹದಸಿರಿಯ
ತಣ್ಪಿಂದೆ. ನೆಲದ ಬಿರಿದೆದೆ ಪುಲ್ಪಸುರ್ಪಿಂದೆ
ಬೆಸುಗೆಗೊಂಡಿದೆ ಮರಳಿ, ವಿರಹಿ ಹೃದಯದ ಮಿಲನ
ಪುಲಕ ಕೃತಿಯಂತೆ. ತೀಡಿದೆ ಶೀತಲಾನಿಲಂ
ಸಹ್ಯಾದ್ರಿ ವನಶಿರಕೆ ಶೈಶಿರಸಸ್ಮೃತಿ ಪುನರ್
ಜನ್ಮಿಸಿದವೋಲ್. ತಳಿರ ಸುಳಿವಿನಿತುಮಿಲ್ಲದೆಯೆ,
ಓಕುಳಿಯನೆರಚುವಾ ಜೀರ್ಕೊಳವಿ ನಿಲ್ವಂತೆ,
ಪೂತು ನಿಂತಿದೆ ಕೆಂಪುವೂ ಸಾಲ್ಮರಂ, ರತಿಯೆ
ಕೃತಿಗೆಯ್ದು ಮನ್ಮಥನ ಬಾಸಿಗಮೆನಲ್. ಹೊಂಗೆ,
ನೆಳಲ ನೆಯ್ಯುವ ಪಸುರ ಪೊಸತಳಿರುಡೆಯನುಟ್ಟು,
ತನ್ನ ಪಾದಕೆ ತಾನೆ ಕುಸುಮ ಧವಳಾಕ್ಷತೆಯ
ರಂಗವಲ್ಲಿಯನಿಕ್ಕಿ, ಮಂಗಳವನುಲಿಯುತಿದೆ
ಭೃಂಗಸಂಗದ ಕಂಠದೋಂಕಾರ ಝೇಂಕೃತಿಯ
ಸಾಮಸಂಗೀತಮಂ. ಹಳದಿವೂ ಸಾಲ್ಮರಂ
ಹೊನ್ನರಿಲ ಸೇಸೆಯಂ ಸೂಸಿ ಶುಭಮಕ್ಕೆಂದು
ನಿನ್ನನಾಶೀರ್ವದಿಸುತಿಹುದು, ಓ ನನ್ನೆದೆಯ
ಶಿಶುಮೂರ್ತಿ, ಕೋಕಿಲೋದಯ ಚೈತ್ರ! ಬಗ್ಗಿಸೆಲೆ
ಕೋಗಿಲೆಯೆ, ನಿನ್ನ ಸಗ್ಗದ ತೂರ್ಯಮಂ. ಉಲಿಯಿರೈ,

ಮಲೆಯ ನೋಟದ ಚೆಲ್ವು ತಾಂ ಬೀಣೆಯಾಗಲಾ
ಶಾಂತಿ ಮೌನದ ತಂತಿಯಂ ಮೀಂಟೆ ಮಿಡಿಯುತ್ತೆ
ಕವಿಗೆ ರಸರೋಮಾಂಚನವನೀವ, ಓ ಮಲೆಯ
ಗರಿವೆತ್ತ ರಸಿಕರಿರ, ಮುಂದೆ ನಿಮ್ಮೊಡನುಲಿವ
ಗಿರಿವನ ಪ್ರಿಯ ಸಖನ ಪುಣ್ಯ ಜನ್ಮೋತ್ಸವಂ
ಸಂಭವಿಸಿತಿಂದು! ಕೈಲಾಸದಿಂದಿಳಿತಂದು
ಹರಸಿಹರು ಶಿವಶಿವಾಣಿಯರಾತನಂ; ಸಿರಿಯ
ಕೂಡೆ ವೈಕುಂಠದಿಂ ಬಂದು ಕಮಲಾಕ್ಷನುಂ;
ವೀಣಾ ಕರದ ಸರಸ್ವತಿಯೊಡನೆ ಅವತರಿಸಿ
ಹರಸಿಹನು ಬ್ರಹ್ಮಂ, ಕಲಾಕೋವಿದಂ. ಬಲ್ಲ
ಋಷಿಗಳುಂ, ಮತ್ತೆಲ್ಲ ಗುರುಗಳುಂ, ಮೇಣಖಿಲ
ಕವಿಗಳುಂ ಸರ್ವದೇವತೆಗಳುಂ ಬಂದಿಲ್ಲಿ
ಹರಸುತಿರೆ ದಿವ್ಯ ಕಂದನ ಜೀವಮಾನಮಂ,
ನೀಡುತಿರೆ ತಮ್ಮ ತಮ್ಮಾತ್ಮೀಯ ದಾನಮಂ,
ನಾನೀವೆನಿದೊ ನಿನಗೆ ಈ ಪ್ರೀತಿತಾನಮಂ,
ಮಂತ್ರಛಂದಃ ಪೂರ್ಣ ಕವಿಹೃದಯಗಾನಮಂ!

## ವಾತ್ಸಲ್ಯ ವಿರಹಿ ೧

ನೀನಂದು ಹೋದಂದು
ತವರುಮನೆಗೆ
ಒಂದು ನೋವನು ಸಹಿಸಿ
ಸಾಕಾಯ್ತು ನನಗೆ. -
ಕಂದನೊಡಗೂಡಿ
ಮೂರು ವರುಷದ ಮೇಲೆ,
ಕಂದನೊಡನಾಡಿ
ಬಾಳು ಸಾಗಿದಮೇಲೆ,
ಇಂದು ತೆರಳಿದೆ ಕೊನೆಗೆ
ಮತ್ತೆ ತಾಯ್ಮನೆಗೆ

ನಿನ್ನೊಡನೆ ಕಂದನನು
ನೆನೆಯಲಾನಂದನನು,
ಆ ಒಂದು ನೋವಿಂದು
ಎರಡಾಗಿ ದಹಿಸೆ
ಸಾಕು ಸಾಕಾಗುತಿದೆ
ನನಗದನು ಸಹಿಸೆ!

## ವಾತ್ಸಲ್ಯ ವಿರಹಿ ೧

ರೈಲು ಹೊರಟಿತು ಮುಂದೆ.
ಬೀಳುಕೊಳುತಾ ನಿಂದೆ,
ನಿಲ್ದಾಣದಲ್ಲಿ.
ತಾಯಿ ಮಕ್ಕಳ್ವೆರಸಿ
ತಂದೆ ಹೊಟ್ಟೆಯನುರಿಸಿ
ಬಂಡಿ ಕಣ್ಮರೆಯಾಯ್ತು
ಇರುಳಿನಲ್ಲಿ….
ಹಾಲು ಬೆಳ್ದಿಂಗಳಲಿ
ಹಾಳು ಬೀದಿಯ ತೊಳಲಿ
ಬಂದೆನಂತೂ ಕೊನೆಗೆ
ಬಾಡಿಗೆಯ ಮನೆಗೆ!
ಹಕ್ಕಿ ಗೂಡನು ಕೊರೆದು
ಮರಿಮಾಡುತದ ತೊರೆದು
ಬಿಟ್ಟ ಪೊಟರೆಯೊಳೆಂತು
ಗಾಳಿ ನರಳುವುದಂತು
ನರಳಿದೆನು ನಿಂತು,
ಮನೆವೆಸರ ಇಟ್ಟಿಗೆಯ
ಆ ಶೂನ್ಯದಲಿ!

## ವಾತ್ಸಲ್ಯ ವಿರಹಿ ೨

“ಟುವ್ವಿ ಟುವ್ವಿ ಟುವ್ವಿ ಟುವಿ
ಟುವ್ವಿ ಟುವ್ವಿ ಟುವ್ವಿ ಟುವ್ವಿ
ಟುವ್ವಿ ಟುವ್ವಿ ಟುವ್ವಿ ಟುವ್ವಿ…”
ಸುಮ್ಮನೆಯೆ ಕೂಗುತಿದೆ!
ಕೂಗುತಿಹೆದೇತಕಾ
ಟುವ್ವಿಹಕ್ಕಿ?
ತೇಜಸ್ವಿಯಗಲಿಕೆಯ
ಉರಿಗೆ ಸಿಕ್ಕಿ?
ಅಂತಲ್ಲದಿನ್ನೇನು?
ಪಂತಕಟ್ಟುವೆ ನಾನು!
ಎಂದಿನಂದದಿ ನೀನು
ಕಣ್ಗೆ ಕಾಣದೆ ತಾನು
ವಿರಹ ದುಃಖಿ!

“ತೇಜಸ್ವಿ ತೇಜಸ್ವಿ
ತೇಜಸ್ವಿ ತೇಜಸ್ವಿ
ತೇಜಸ್ವಿ ತೇಜಸ್ವಿ…”
ಎಂದು ನಿನ್ನನೆ ಕರೆದು
ಮೊಟ್ಟೆಗೂಡನು ತೊರೆದು
ಹಾತೊರೆದು ಕೊರಗುತಿದೆ;
ನೆನೆ ನೆನೆದು ಮರುಗುತಿದೆ
ಪುಟ್ಟಹಕ್ಕಿ!
“ನನ ಗೂಡಿಹ ಗಿಡದ
ಧೂಳಿಡಿದ ಬುಡದ

ಮಣ್ಣಾಟವನು ಬಿಡದ
ಅವ ಎತ್ತ ನಡೆದ?”
ಎಂದು ಕರೆದೊರಲುತಿದೆ
ನಿನ್ನ ಟುವ್ವಿಯ ಹಕ್ಕಿ
ವಿರಹದುಃಖಿ!

## ವಾತ್ಸಲ್ಯ ವಿರಹಿ ೪

ಅಲ್ಲಿ ಶಿವಮೊಗ್ಗೆಯಲಿ
ಮನೆ ಮುಂದೆ ರಸ್ತೆಯಲಿ
ನೀನು ದೂಳಾಡುತಿರೆ
ಬಹುವೇಗಿಯಾಗಿ ಬರೆ
ಮಾರಿ ಬಸ್ಸು,
ಕಂಡು ಮೇಲೇಳುತಿರೆ...
ಶಿವ ಶಿವಾ!...
ಗುರು ರಕ್ಷೆ! ಗುರು ರಕ್ಷೆ!
ಸಾಕು ನನಗೀ ಶಿಕ್ಷೆ!
ಬೆಂಕಿಯಿಕ್ಕಲಿ! ಹಾಳು
ಕವಿ ಕಲ್ಪನೆಯ ಬಾಳು
ಗರಗಸದ ಗೋಳುಃ
ಸುಖದುಃಖದೆಳತಕ್ಕೆ
ಸೀಳು ಸೀಳು!

## ವಾತ್ಸಲ್ಯ ವಿರಹಿ ೫

ಆಡಿ, ಓಡಿ, ಕಾಡಿ, ಬೇಡಿ,
ನಲಿಸಿ ನಲಿವ ಕಂದನಿಲ್ಲ;
ಬದುಕನೊಂದು ಗಾನಮಾಡಿ
ಒಲಿಸಿ ಒಲಿವ ನಲ್ಲೆಯಿಲ್ಲ,
ಕಂದನಿಲ್ಲ, ನಲ್ಲೆಯಿಲ್ಲ,
ನಾನೊಬ್ಬನೆ ಮಂಚವೆಲ್ಲ!
ಉಸಿರನೆಷ್ಟನೆಳೆದುಕೊಳಲಿ
ಶ್ವಾಸಕೋಶ ತುಂಬಲೊಲ್ಲ!
ಅತ್ತ ಹೊರಳಿ, ಇತ್ತ ಹೊರಳಿ,

ನಿದ್ದೆಗೆಟ್ಟಿತೂಹೆ ಕೆರಳಿ.
ತೊಳಲಿ, ತೊಳಲಿ, ಕಡೆಗೆ ಬಳಲಿ
ಮನನು ಕನಸನಪ್ಪಿತು!
ಕೊನೆಗೆ, ಕನಸಿನಾಚೆಯಲಿ
ನಿದ್ದೆಬೊಮ್ಮದೈಕ್ಯದಲ್ಲಿ
ಮಿಲನಶಾಂತಿ ಒಪ್ಪಿತು!

## ವಾತ್ಸಲ್ಯ ವಿರಹಿ ೬

ನೀನು ಅಮ್ಮನ ಕೂಡಿ
ಅಜ್ಜಿ ಮನೆಗೆ
ಹೋದಿರುಳು ಬೆಳಗಾಯ್ತು
ಎಂತೊ ಕೊನೆಗೆ.
ಎಂತು ತಿಳಿಸಲಿ ಹೇಳು
ಹಸುಳೆ ನಿನಗೆ?
ನಿಮ್ಮ ನೆನಹಿನ ಉರಿಯೆ
ಹೊತ್ತಿತೆನಗೆ!
ಪಕ್ಕದಲಿ ನೀನೆಲ್ಲಿ?
ನಿನ್ನಮ್ಮನೆಲ್ಲಿ?
ಶೂನ್ಯತೆಯೆ ಮಲಗಿತ್ತು
ಇಡಿ ಮಂಚದಲ್ಲಿ?
ಸುಯ್ಯತಲ್ಲಿಂದೆದು
ಒಂದೆನಂಗಳಕಲ್ಲಿ
ನೀನಾಡಿದಾ ಮುದ್ದು
ಮಣ್ಣಿನಲ್ಲಿ
ಕಂಡೆನೊಂದಲ್ಪಮಂ,
ಬೆಂದೆದೆಗೆ ತಣ್ಪೀವ
ಸವಿಸೊದೆಯ ತಲ್ಪಮಂ:
ಒಂದು ಕರಟದ ಚಿಪ್ಪು,
ಮಣ್ಣಿಡಿದ ಬಿರಿದೊಡೆದ
ನೀನಾಡಿದಾ ಚಿಪ್ಪು,

ಮಣ್ಣಾಟದಾ ಚಿಪ್ಪು,
ನಿನ್ನಾಟದಾ ಚಿಪ್ಪು
ನೀನಾಡಿದಾ ಮುದ್ದು
ಮಣ್ಣಿನಲ್ಲಿ
ಪರದೇಶಿಯಾಗಿದ್ದು
ಪರದೇಶಿಯೋಲ್ ಬಿದ್ದು
ಹನಿಯ ತಂದುದು ನನ್ನ
ಕಣ್ಣಿನಲಿ!

ಕಾಣಲಾ ನಿನ್ನೊಲುಮೆ
ಚಿಮ್ಮಿತಕ್ಕರೆ ಚಿಲುಮೆ.
ಅದನ್ನೆತ್ತಿ, ಎದೆಗೊತ್ತಿ,
ದೇವರ ಮನೆಗೆ ಬಂದೆ:
ನೈವೇದ್ಯವನೆ ತಂದೆ!
ನಿನ್ನ ನೆನಹಿನ ನಿಧಿಯ
ಆ ಕರಟ ಚಿಪ್ಪು
ಹೂವು ಹಣ್ಣಿಗೆ ಮಿಗಿಲು
ಗುರುದೇವಗೊಪ್ಪು:
ಬೇರೆ ಹೂವಿಡಲಿಲ್ಲ:
ಬೇರೆ ಹಣ್ಣಿಡಲಿಲ.
ನನ್ನ ಮುಡುಪಿಗೆ, ಬಲ್ಲೆ,
ದೇವರೊಪ್ಪಿದನು;
ನನ್ನ ಕಂದನ ಕರಟ
ಚಿಪ್ಪನಪ್ಪಿದನು!
ಆ ಚಿಪ್ಪು ಚಿಪ್ಪಲ್ಲ:
ದೇವರೇಂ ಬೆಪ್ಪಲ್ಲ!
ಅಕ್ಕರೆಯ ಜತೆಮಾಡಿ
ಏನಾದರೇಂ ನೀಡಿ:
ನೈವೇದ್ಯವೆಲ್ಲ!

## ವಾತ್ಸಲ್ಯ ವಿರಹ ೭

ನೀನಿಲ್ಲ….
…. ಮನೆಯಲ್ಲಿ
ಎಲ್ಲಿ ಕಣ್ಣಿಡಲಲ್ಲಿ
ಕಸವಿಲ್ಲ….
…..ರಸವಿಲ್ಲ! -
ಬಗೆಗೆ ಸುತವಾತ್ಸಲ್ಯ
ಒಗೆಯಲೀ ನೈರ್ಮಲ್ಯ
ಬರಿ ಅಸಹ್ಯ:
ನೀ ಚೆಲ್ಲುವಾ ಧೂಳಿ
ಆಗಿತ್ತು ರಂಗೋಲಿ;
ನೀ ಹರಡುತಿದ್ದ ಕಸ
ಆಗಿತ್ತು ಜೀವರಸ;
ನೀನಿಲ್ಲದೀ ಮನೆಯ
ನೈರ್ಮಲ್ಯವೇ, ತನಯ,
ನನಗಾಯ್ತಸಹ್ಯ

## ವಾತ್ಸಲ್ಯ ವಿರಹಿ ಲ

ಓ ನನ್ನ ಕಂದಯ್ಯ,
ನೀ ಕೂಗಾಡಿದರೆ
ಸದ್ದು ಮಾಡದಿರೆಂದು
(ಮುದ್ದಾಗಿಯಾದರೂ)
ಗದರಿಸುತ್ತಿದ್ದೆ.
ನೀನಮ್ಮನೊಡಗೂಡಿ
ಹೋದೆ ಅಜ್ಜಿಯ ಮನೆಗೆ;
ಈಗ ಸದ್ದಿನಿತಿಲ್ಲ!

ಹಾಳು ನಿಶ್ಯಬ್ಧತೆಯೆ,
ಗಾಳೆನ್ನುವಾ ವೆತೆಯೆ,
ಎದೆಯ ಮೇಲೇರಿ
ಮಾಡುತಿಹುದಯ್ಯೊ ಹಾ
ದೆವ್ವದ ಸವಾರ್‍ತ್ರಿ

## ವಾತ್ಸಲ್ಯ ವಿರಹಿ ೯

ನೀನಜ್ಜಿ ಮನೆಗೆಯ್ದು
ಆಗಿತ್ತು ದಿನವೈದು.
ಏಕಾಂತಕವಚತ್ತು
ಏಕಾಂಗಿ ಬೇಸತ್ತು,
ಹನುಮನನು ಬೀಳ್ಕೊಟ್ಟು
ರಾಮಾಯಣವನಿಟ್ಟು
ವಾಲ್ಮೀಕಿಯನು ಬಿಟ್ಟು,
ಹೊರ ಅಂಗಳಕೆ ಬಂದೆ;
ತೆಂಗು ಮರದಡಿ ನಿಂದೆ:

ಎರಡು ವರುಷದ ಹಿಂದೆ
ನಿನ್ನುಸಿರ ತಂದ
ನಿನ್ನ ಮೋಹದ ತಂದೆ,
ಓ ನನ್ನ ಕಂದ!
ಸುಳ್ಳಲ್ಲ, ತೇಜಸ್ವಿ,
ಎರಡೆ ವರುಷದ ತೆಂದೆ:
ನಾವಿಬ್ಬರೊಂದೆ!

ಗಂಟೆ ಎಂಟರ ಹೊತ್ತು;
ಬೆಚ್ಚನೆಳಬಿಸಿಲಿತ್ತು.
ತೆಂಗು ಹೂವಲ್ಲಲ್ಲಿ
ದೂಳೆದ್ದ ನೆಲದಲ್ಲಿ

ನಿನ್ನಾಡುವೊಲದಲ್ಲಿ
ಮುದ್ದು ಚೆಲ್ಲಿ
ಮುತ್ತಿನೋಲೆರಚಿತ್ತು
ರಂಗವಲ್ಲಿ.
ಗೆರೆಗೆರೆಯ ಕರಿನೆಳಲು
ನಡುಗುತಿರೆ ನೆಲದಲಿ
ಗಾಳಿ ಮರ್ಮರಿಸಿತ್ತು
ಗರಿಗಳಲ್ಲಿ.
ಗೋಡೆಯೆಡೆ ಗಿಡದಲ್ಲಿ
ಎಲೆ ಹೆಣೆದು ಮರೆಸಿದ್ದ
ಹತ್ತಿಯಾ ಮೆತ್ತನೆಯಾ
ಗೂಡಿನಲ್ಲಿ
ನಿನ್ನ ಟುವ್ವಿಯ ಹಕ್ಕಿ?....
ಇಲ್ಲ! ಎಲ್ಲಿ?
ಮುದ್ದು ಬೀಡನು ಬಿಟ್ಟು
ಹೋಯಿತೆಲ್ಲಿ?
ಹುಡುಕುತಿರೆ ಕಣ್‌ಸುಳಿಸಿ,
ಓ, ಅಲ್ಲಿ ನೋಡಲ್ಲಿ:
ಗೂಡನೂ ಹಾಡನೂ
ಎರಡನೂ ತೊರೆದು,
ಮೂಕ ಶೋಕದ ಚಿಂತೆ
ಸ್ವಪ್ನದಲಿ ಸುಳಿವಂತೆ,
ಗರಿಹೊರಗೆ ದಣಿದುದೆನೆ,
ನೋಡು, ಕುಪ್ಪಳಿಸುತಿದೆ
ಹರೆಹರೆಗೆ ಹರಿದು.
ಫಕ್ಕನೇನಿದು ಕಾಲ್ಗೆ
ನಿನ್ನ ಮೆಯ್ ಕೋಮಲತೆ
ಸೋಂಕಿದಂತೆ?
ದೇಶಮಾಯೆಯ ಮೀರಿ
ಶಿವಮೊಗ್ಗೆಯೆನೆ ಸೇರಿ
ಅಪ್ಪಿದಂತೆ!
ರೋಮಾಂಚನಂ ಬೆತ್ತು

ನೆಲವ ನೋಡಿದರಿತ್ತು
ದೂಳುರಾಸಿ!
ಎದುರುಗೊಂಡಿತು ಕಣ್ಣ
ಕೈಯ ಮುದ್ರಿಕೆ ಸಣ್ಣ,
ಕೊಂಚ ಮಾಸಿ! -
ನೀ ಮಾಡಿದಾ ರಾಸಿ!
ನಿನ್ನ ಕೈಯಚ್ಚು!
ನಿನ್ನ ಮೆಯ್ಯನು ಮಾಸಿ
ಬಯ್ಸಿಕೊಂಡಾ ರಾಸಿ
ಇಂದಾಯ್ತು ಮೆಚ್ಚು:
ಕಂದನಕ್ಕರೆಬುತ್ತಿ
ಮತ್ತೆ ಮತ್ತದನೊತ್ತಿ
ಸ್ಪರ್ಶಸುಖಿಯಾದೆ! -
ಯಾರು ಹುಚ್ಚೆಂದರೂ
ನನಗೆ ಮರ್ಯಾದೆ!

## ವಾತ್ಸಲ್ಯ ವಿರಹಿ ೧೦

ಯಾವ ಸುಂದರ ಮುಖವು ನನಗೆ ರುಚಿಸುವುದಿಲ್ಲ;
ಏಕೆಂದರಿಂದು ನೀ ಜೊತೆಯೊಳಿಲ್ಲ.
ಚೆಲುವೆನಿತು ತುಂಬಿರಲಿ, ಮೋಹಕಾರಿಗಳಲ್ಲ:
ನಿನ್ನ ನೆನಪನೆ ತಹವು ಮುಖಗಳೆಲ್ಲ!

## ವಾತ್ಸಲ್ಯ ವಿರಹಿ ೧೧

ಬಾಳನು ತುಂಬಿವೆ ಹೆಜ್ಜೆಯ ಸಾಕ್ಷಿ;
ಸಾವಿರ ಸಾವಿರ ಸಾವಿರ ಸಾಕ್ಷಿ.
ಸತ್ತಿಲ್ಲಿನ್ನೂ ಸಂಶಯ ಪಕ್ಷಿ;
ಅರಳಿಲ್ಲಿನ್ನೂ ಶ್ರದ್ಧೆಯ ಅಕ್ಷಿ:

ಇದು ನಾಸಿಕಗೀಸ್ತಿಕತನವಲ್ಲ;
ಬರೀ ಕೃತಘ್ನತೆ, ಸಭ್ಯತೆಯಿಲ್ಲ!

## ವಾತ್ಸಲ್ಯ ವಿರಹಿ ೧೨

ಹೂ ಹಿಡಿದು ಮುಡಿ ಮಣಿದು
ನಿಂತಿರುವ, ಓ ಗಿಡವೆ,
ನಿಚ್ಚ ದೂಳಾಡಿದಾ
ಕಂದನಿಲ್ಲದೆ ‘ಬೆಕೋ’
ಪಾಳು ಬಿದ್ದಿದೆ ನಿನ್ನ
ಬೋಳು ಬುಡವೆ!
ಜಡೆ ಮಾತ್ರ ಮುತ್ತೈದೆ,
ಅಡಿಗಿಲ್ಲ ಒಡವೆ!
ತಲೆಯೆಲ್ಲ ಶ್ರೀಮಂತೆ,
ಕಾಲು ಕೈ ಬಡವೆ!
ಒಲಿದ ಕಂದನ ಸಂಗ
ಮರಳಿ ನಿನಗೊದವೆ
ಐದೆತನದೊಡನೊಡನೆ
ಮರಳುವುದು ಮದುವೆ.
ಅದುವರೆಗೆ ನೀನೆಷ್ಟೆ
ಹೂ ಮುಡಿದರೂ, – ಅಷ್ಟೆ:
ವಿಚಿತ್ರ ವಿಧವೆ!

## ವಾತ್ಸಲ್ಯ ವಿರಹಿ ೧೩ (ಒಂದು ಕಟುನಿಮಿಷದಲ್ಲಿ)

ಏಕಾಂಗಿ, ಏಕಾಂಗಿ, ಏಕಾಂಗಿ,
ಅಯ್ಯೊ ನಾನೇಕಾಂಗಿ!
ಓ ಶಿವಾ, ನಿನ್ನನುಳಿದಾರನೂ ಕಾಣೆ ನಾನ್
ನನಗನವರತ ಸಂಗಿ!

ಹೆತ್ತವರು ಸತ್ತರೆಂದೋ;
ಸತ್ತರೊಡವುಟ್ಟಿದವರೂ.
ಚಿತ್ತದಲಿ ಸಮಸಖರನಿನ್ನುಮಾನ್ ಪಡೆದಿಲ್ಲ.-
ಕೈಹಿಡಿದ ಸತಿಗೋ
ತಾಯಿ ತಂದೆಯರಿಹರು; ತವರಿಹುದು;
ನಾನೆ ಸರ್ವಸ್ವವಲ್ಲ.
ಮುದ್ದು ಕಂದಂಗಿಹಳು ಮುದ್ದಾಡುವಾ ತಾಯಿ.
ಕಡೆಗೆ ನಾನೊಬ್ಬನೇ ಬೀದಿನಾಯಿ!
ಏಕಾಂಗಿ, ಏಕಾಂಗಿ, ಏಕಾಂಗಿ,
ಅಯ್ಯೊ ನಾನೇಕಾಂಗಿ!
ಓ ಶಿವಾ, ನಿನ್ನನುಳಿದಾರನೂ ಕಾಣೆ ನಾನ್
ನನಗನವರತ ಸಂಗಿ!

## ಕಂದನ ಮೈ

ದೇವರ ಹರಕೆಯ ಬಾನಿಂ ಭೂಮಿಗೆ
ನೀಡಿದ ಕೈ ಈ ಕಂದನ ಮೈ!
ಈ ಮುದ್ದೀ ಸೊಗಸೀ ಪೆಂಪಿಂಪಂ
ಮಾಡಬಲ್ಲುದೇನನ್ಯರ ಕೈ?

ನೋಡಾ, ತುಂಬು ಸರೋವರವೀ ಕಣ್:
ಆಕಾಶದ ಶಿವನಂ ಪ್ರತಿಫಲಿಸಿ
ಅತ್ತಿಂದಿತ್ತಲ್ ಇತ್ತಿಂದತ್ತಲ್
ಚಲಿಸುತ್ತಿವೆ ಸಾಗರಗಳ ಸಂಚಲಿಸಿ!

ಅಣ್ಣನ ಕಾಲಿದು ಪುಣ್ಯದ ಕಾಲು:
ಮೇರುಪರ್ವತವನೇರಿದ ಕಾಲು;
ದೇವಗಂಗೆಯೊಳೀಜಿದ ಕಾಲು;
ಹೊನ್ನಿನ ಹುಡಿಯುಲಿ, ಹಾಲ್ಕೆನೆ ಕೆಸರಲಿ
ಸಿಂಗರಗೊಂಡಿವೆ ಈ ಕಾಲು!

ಕನ್ನಡಿ ಹಿಡಿದಿದೆ ಬ್ರಹ್ಮಾಂಡಕೆ ಈ
ಕಂದನ ಮುಖದರ್ಪಣ ಕಾಣಾ!
ಸೂರ್ಯ ಚಂದ್ರರಲೆಯುತ್ತಿಹರಲ್ಲಿ;
ಉರಿದಿವೆ ತಾರಾ ಕೋಟಿಗಳಲ್ಲಿ;
ಹೊಳೆ ತೊರೆ ಹರಿದಿವೆ; ಮುನ್ನೀರ್ ಮೊರೆದಿವೆ;
ಪರ್ವತ , ಕಾನನ, ಖಗಮೃಗ ಮೆರೆದಿವೆ;
ಸೃಷ್ಟಿಯೊಳೇನೇನಿಹುದೋ ಎಲ್ಲಾ
ಈ ಮುಖದೊಳೆ ಕವಿ ಕಾಣಲು ಬಲ್ಲ:
ನಿನಗೂ ಕಾಣುವ ಕಣ್ಣದ್ದರೆ ಕಾಣಾ,
ಬರೆದುದನೋದುವ ಬಲ್ ಜಾಣಾ!

## ಹರಕೆರೆಯ ಹರಕೆ

ಹರಸುವನಿದೊ ಕವಿ: ನಿನ್ನಯ ತಂದೆ:
ಈ ಮೊರೆ ಮರುದನಿಮೊರೆಯಲಿ ಜೀವನದಲಿ ಮುಂದೆ!
ವಿಕ್ರಮ ಸಂವತ್ಸರದೀ ಸಂಧ್ಯೆ
ಚೈತ್ರ ಬಹುಳ ಸಪ್ತಮಿಯಿನನಿಂದೆ
ಉಜ್ಜ್ವಲರಾಗಿಣಿಯಾಗಿರೆ, ಬಂದೆ!
ಕಂದನೊಲಿದೆತ್ತಿ,
ಕವಿಹೃದಯಕ್ಕೊತ್ತಿ,
ತುಂಗೆಯ ನೀರ್ ಕರೆಯನು ಆಲಿಸಿ ನಿಂದೆ.

ಬಂಡೆಯ ನಡು ಧುಮುಕುತ್ತಿದೆ ನಿರ್ಝರದೊಲ್ ಜಲಘೋಷ.
ತೆರೆ ತೆರೆ ತೆರೆ ಅಪ್ಪಳಿಸಿದೆ ನೆಗೆಯುವ ನೀರ್ ಆವೇಶ.
ನೊರೆ ನೊರೆ ನೊರೆ ಉಕ್ಕುತ್ತಿದೆ ಮುತ್ತಿನ ಗೊಂಚಲ್ ಬುಗ್ಗೆ:
ಸೌಂದರ್ಯ ಸಿರಿದುರ್ಗಕೆ ರಸದಪ್ರತಿಹತ ಲಗ್ಗೆ!

ಕೇಳಿಸದೀ ಬೈಗಿನ ಹಕ್ಕಿಗಳುಲಿ:
ಧ್ವನಿಲೋಕವೆ ಲಯವೀ ನೀರ್ ಮೊರೆಯಲಿ!
ಸತ್ಯದ ಕರೆ, ಧರ್ಮದ ಕರೆ,
ಸೌಂದರ್ಯದ ಕರೆ, ಸೌಹಾರ್ದದ ಕರೆ,
ದೇಶದ ಕರೆ, ಭಾಷೆಯ ಕರೆ,

ತ್ಯಾಗದ ಭೋಗದ ಯೋಗದ ಕರೆ,
ಸಾಕ್ಷಾತ್ ಲೋಕೇಶ್ವರನಾತ್ಮದ ಕರೆ,
ಎಲ್ಲ ಕರೆಗಳೂ ಕರೆಯುತ್ತಿವೆ ಕೇಳ್;
ಈ ನೀರ್ ಕೊರಲಲಿ ಮೊರೆಯುತ್ತಿವೆ ಕೇಳ್;
ಆಲಿಸು ಕೇಳ್;
ಆಲಿಸಿ ಕೇಳ್:
ಆಲಿಸಿ, ಪಾಲಿಸಿ, ಕಂದಾ, ಬಾಳ್!
ಹರಸುವನಿದೊ ಕವಿ: ನಿನ್ನಯ ತಂದೆ:
ಈ ಮೊರೆ ಮರುದನಿಮೊರೆಯಲಿ ಜೀವನದಲಿ ಮುಂದೆ!
ತಂದೆಯ ಬಯಕೆಗೆ ಮೇಣ್ ಕವಿ ಹರಕೆಗೆ,
ಕೊನೆಯಿಲ್ಲದ ಈ ಕಾನನರಾಜಿಯೆ ಸಾಕ್ಷಿ;
ಬಾನ್ ಮುಟ್ಟುವ ಈ ಪರ್ವತ ಪಂಕ್ತಿಯೆ ಸಾಕ್ಷಿ;
ನಕ್ಷತ್ರದ ನೆಲ ಈ ಆಕಾಶವೆ ಸಾಕ್ಷಿ;
ಎಲ್ಲೆಲ್ಲಿಯು ಇಹ ಶ್ರೀಗುರುದೇವನೆ ಚಿರ ಸಾಕ್ಷಿ!

## ಪ್ರಣಯ ಕಟಕಿ

ಬರಲಿರುವ ಕಂದಂಗೊ
ಬಂದ ಕಂದಂಗೊ
ಹೊಲಿಯುತಿರುವೀ ಅಂಗಿ
ಆರಿಗರ್ಧಾಂಗಿ?

## ಬೆನಕನ ಚೌತಿ

ಬಂದಿದಾನೆ ಬಂದಿದಾನೆ
ಇಂದು ಮನೆಗೆ ಬಂದಿದಾನೆ
ನನ್ನ ದೇವರು.
ತಂದಿದಾನೆ ತಂದಿದಾನೆ
ತನ್ನ ತಾನೆ ತಂದಿದಾನೆ
ನನ್ನ ದೇವರು.

ದಯಾ ಶಾಂತಿ ಕೃಪಾಮೂರ್ತಿ
ಅಗಣ್ಯಪುಣ್ಯ ಕಲಾಕೀರ್ತಿ
ನನ್ನ ದೇವರು
ಬಂದಿದಾನೆ ಬಂದಿದಾನೆ
ತನ್ನ ತಾನೆ ತಂದಿದಾನೆ
ನನ್ನ ದೇವರು.

ಸ್ಕೃತಿ, ವಿಸ್ಕೃತಿ, ಮೃತಿ, ಸಂಸ್ಕೃತಿ,
ಸರ್ವ ರಸಾವೇಶ ಕೃತಿ,
ಶಿವ, ಪಾರ್ವತಿ, ಗುರು, ಗಣಪತಿ,
ಕ್ರಿಸ್ತ-ಬುದ್ಧ ಬಹುಸಂಸ್ಕೃತಿ,
ಕೃಷ್ಣ-ರಾಮ ಬಹು ಆಕೃತಿ
ನನ್ನ ದೇವರು
ಬಂದಿದಾನೆ ಬಂದಿದಾನೆ
ತನ್ನ ತಾನೆ ತಂದಿದಾನೆ
ನನ್ನ ಸದ್ಗುರು.

ಗಿರಿ ಅರಣ್ಯ ಗಗನರೂಪಿ
ನದೀ ಸರಸ್ ಸಮುದ್ರರೂಪಿ
ಪಕ್ಷಿಕೋಟಿ ಗಾನರೂಪಿ
ಲಕ್ಷರಮ್ಯ ದೃಶ್ಯರೂಪಿ

ನನ್ನ ದೇವರು
ಇಂದು ಮನೆಗೆ ಬಂದಿದಾನೆ
ತನ್ನ ತಾನೆ ತಂದಿದಾನೆ
ಜಗ ಜಗದ್ಗುರು.

ತಂದೆ ತಾಯಿ ತಂಗಿಯಾಗಿ
ನೆನಹಿನೊಂದು ಬುತ್ತಿಯಾಗಿ,
ಕೆಳೆಯನಾಗಿ, ಕಂದನಾಗಿ,
ಉಸಿರಿಗುಸಿರನೊಸೆದು ಬೆಸೆದು
ತನ್ನತನವನೆನ್ನೊಳೆಸೆದು
ಕೈಹಿಡಿದೀ ಮಡದಿಯಾಗಿ,
ಸ್ನೇಹರೂಪಿ ಪ್ರೇಮರೂಪಿ

ಧರ್ಮಸಹಿತ ಕಾಮರೂಪಿ
ನನ್ನ ದೇವರು
ಬಂದಿದಾನೆ ಬಂದಿದಾನೆ
ತನ್ನ ತಾನೆ ತಂತಿದಿದಾನೆ
ನಂದ ಶಿವಗುರು.

ನವಿಲುಕಲ್ಲ ಮೇಲೆ, ನಿಶೆಯ
ಅಂಚಿನಲ್ಲಿ, ಮೂಡುವುಷೆಯ
ಮಂಜುಗಡಲ ಬೆಳಗಿನಂತೆ,
ಅಲೆಯಲೆಯಲೆ ಅಲೆವ ಮಲೆಯ
ಬಾನ ಕರೆಯ ಮೋಡಗೊಲೆಯ
ಕವಿಶೈಲದ ಸಂಜೆಯಂತೆ
ನನ್ನ ದೇವರು
ಬಂದಿದಾನೆ ಬಂದಿದಾನೆ
ತನ್ನ ತಾನೆ ತಂದಿದಾನೆ
ರಸದ ಸುರತರು.

ಸಹ್ಯಾದಿಯ ಮಲೆಚೆಲುವೋಲ್
ಬ್ರಹ್ಮಾದ್ರಿಯ ಬಾನ್ ಗೆಲುವೋಲ್
ಜೋಗದ ಜಲಪಾತದವೋಲ್
ಫಾಲ್ಗುಣ ಪ್ರಾಭಾತದವೋಲ್,
ಬೇಲೂರಿನ ಹಳೆಬೀಡಿನ
ಬೆಳ್ಗೊಳದಾ ಗೊಮಟೇಶನ
ಸುರಕಲ್ಪಿತ ಚಿರಶಿಲ್ಪದ
ಸೌಂದರ್ಯದ ಸನ್ನಿಧಿವೋಲ್
ನನ್ನ ದೇವರು
ಬಂದಿದಾನೆ ಬಂದಿದಾನೆ
ಕಣ್ಣಮುಂದೆ ನಿಂದಿದಾನೆ
ನನ್ನ ಹೃದ್ಗುರು.

ಸರ್ವದೇಶ ಸರ್ವಕಾಲ
ಸರ್ವಕಾವ್ಯ ಸರ್ವಕಲಾ
ಕವಿಸಾಹಸ ಋಷಿಸಾಹಸ

ಸರ್ವಸಾಧನಾತ್ಮರೂಪಿ,
ಭುವನಸರ್ವ ಬುದ್ಧಿರೂಪಿ
ಸೃಷ್ಟಿಸರ್ವ ಸಿದ್ಧಿರೂಪಿ
ನನ್ನ ದೇವರು
ಬಂದಿದಾನೆ ಬಂದಿದಾನೆ
ಇಂದು ಮನೆಗೆ ಬಂದಿದಾನೆ
ಇದೊ ಸುಹೃದ್ಗುರು!
ಜಗ ಜಗದ್ಗುರು!
ನನ್ನ ದೇವರು!

## ಬಂದನು ಬಾನತಿಥಿ

ಬಂದನು ಕಾಣ್ ಅದೊ ಮಳೆಯಾಗಿ
ಆಕಾಶದ ಅತಿಥಿ!
ಪೃಥಿವಿಯ ಕೃಪಣತೆಯನು ನೀಗಿ
ಆಶೀರ್ವಾದದ ಕೃಪೆಯಾಗಿ
ಬಂದನು ಆಕಾಶದ ಅತಿಥಿ
ಕಾಣ್ಅದೊ ಮಳೆಯಾಗಿ.

ತೆಂಗಡಿಕೆಯ ಗರಿಗೈ ಬೀಸಿ
ಸುಸ್ವಾಗತಿಸಿದೆ ಪೃಥಿವಿ;
ಪುಳಕಿಸುತಿದೆ ಪೊಸ ತೃಣರೋಮಂ
ಮರ್ತ್ಯವ ಸೋಂಕಲ್ ಸ್ವರ್ಧಾಮಂ!
ಬಿಲ್ ಕಟ್ಟಿಹನದೊ ಕಾಣ್ ಕಾಮಮ್:
ವಾಸಕಸಜ್ಜಿಕೆ ಪೃಥಿವಿ!

ಬಂದನು ಬಂದನು ಬಾನತಿಥಿ:
ಕುಣಿ, ಕರೆ, ಗೆಲ್ಲುಲಿಗೈ!
ಗಾನಂ ಗೆಯ್ಯಲಿ ಪಕ್ಷಿರುತಿ;
ಹೂಮಳೆಯೆರಚಲಿ ಸಸ್ಯರತಿ;
ಜೈ ಜೈ ಬಾರೈ ಬಾನತಿಥಿ!
ಜೈ ಜೈ ಜೈ ಜೈ ಜೈ !

# ಸಾಮಾನ್ಯತೆ ಭಗವಂತನ ರೀತಿ

ತೆಂಗಿನ ಮರದಡಿ ನಾನೂ ನೀನೂ,
ಯೌವನ ಶಿಶುತನಗಳ ಜೋಡಿ,
ನಮ್ಮಿಬ್ಬರ ನೆಳಲೂ ಎಳಬಿಸಿಲೂ
ಕುಣಿಕುಣಿದಾಡಿರೆ ಜತೆಗೂಡಿ
ತಲ್ಲಣಿಸೆದೆ ತ್ರೈಭುವನಾಕ್ಷಿ;
ಶಿವ ಸಾಕ್ಷಿ!

ಮರ್ಮರ ಗೈದಿದೆ ಗರಿಯಲಿ ಗಾಳಿ.
ಎಲೆದೊಟ್ಟಿಲೊಳದೊ ಕಿರಣ ಶಿಶು
ತಳತಳ ನಲಿದಿದೆ ಮುದವನು ತಾಳಿ:
ನಮ್ಮಂತೆಯೆ ಅದಕೂ ಮನಸು!
ಇಂಚರವುಲಿಯುತ್ತಿದೆ ಹಕ್ಕಿ,
ಸುಖವುಕ್ಕಿ!

ಇರುಳುಸಿರಿಂದುದುರಿದ ತೆಂಗಿನ ಹೂ,
ತರಗೆಲೆ, ಪುಡಿದೂಳ್, ಕಲ್, ಮಣ್ಣು,
ಬಣ್ಣದ ಚಿಟ್ಟೆಯ ರೆಕ್ಕೆಯ ಕಣ್ಣು, –
ಇವೆ ಸರ್ವೋತ್ತಮ ಸಂಪತ್ತು! –
ಗಣಿಯಲ್ಲೇನಿದೆ ಇಲ್ಲಿದೆ ಕಾಣ್
ಐಸಿರಿಗಣ್!

ಸಾಮಾನ್ಯತೆ ಭಗವಂತನ ರೀತಿ;
ಸಾಮಾನ್ಯವೆ ಭಗವತ್ ಪ್ರೀತಿ.
ರಾಜ್ಯವನುರುಳಿಸಿ ಕಟ್ಟುವ ಕೀರ್ತಿ,
ವೈರಿಯನೆದೆಮೆಟ್ಟುವ ಕೀರ್ತಿ –
ಫೋ! ತೆಗೆ! ಪೈಶಾಚಸ್ಫೂರ್ತಿ!
ಬರಿ ನೇತಿ!

ಸಂಸಾರದ ಸಾಧನೆಗಿದೆ ಸಿದ್ಧಿ:
ಸಕಲೈಶ್ವರ್ಯದ ಸುಖಕಿದೆ ಕಣ್:
ಕಂದನೊಡನೆ ಕುಣಿದಾಡುವ ಬುದ್ಧಿ;
ಕಂದನ ಸಿರಿಮೆಯ್ಗಂಟಿದ ಮಣ್!
ಇನ್ನೆಲ್ಲರಸುವೆ? ಇಲ್ಲಿದೆ, ಕಾಣ್,
ಈಶನ ಕಣ್!

## ಉದಯ ಗಾನ

ನಿದ್ದೆ ಸಾಕೆದ್ದೇಳೊ, ನನ್ನ ಮುದ್ದು ಕಂದಯ್ಯ;
ಹೊದ್ದ ಕತ್ತಲೆಯೊದ್ದು ಬೆಳಗೇಳುತಿದೆ ನೋಡೊ,
ಮುದ್ದು ಕಂದಯ್ಯ!

ಕೈಲಾಸದಲ್ಲಿ ಶಿವ ಪಾರ್ವತಿಯರೆದ್ದು
ಗಂಗೆಯ ಮಿಂದು ಹಿಂದಿರುಗುವರದೆ ಕಾಣೊ
ಮುಡಿಯ ಕೊಡಹಿದ ತುಂತುರಿಳಿಯುತಿಬ್ಬನಿಯಾಗಿ
ಮಿರುಗಿದೆ ಹೂವಲೆ ಹಸುರು ಹುಲ್ಲಿನ ಮೇಲೆ
ಮುತ್ತು ಬಿತ್ತಿದವೋಲೆ ಕಣ್ಗೆ ಮುತ್ತೊತ್ತಿ!
ನಿದ್ದೆ ಸಾಕೆದ್ದೇಳೊ, ನನ್ನ ಮುದ್ದು ಕಂದಯ್ಯ;
ಹೊದ್ದ ಕತ್ತಲೆಯೊದ್ದು ಬೆಳಗೇಳುತಿದೆ ನೋಡೊ,
ಮುದ್ದು ಕಂದಯ್ಯ!

ಇಣಿಕಿಣಿಕಿ ನಾಚಿ ಮರೆಯಾಗುತಿದೆ ಚುಕ್ಕಿ;
ಗೂಡಿನಿಂದೆದ್ದು ಹಾರಾಡಿ ಹಾಡಿದೆ ಹಕ್ಕಿ.
ಮಕರಂದವೀಂಟುವ ಜೇನುಗಾನವ ಕೇಳಿ
ಅಲರಿಂದ ಅಲರಿಗೆ ಅಲೆದಾಡುತಿದೆ ಗಾಳಿ.
ಕಿರಣ ಚಾಮರದಿಂದೆ ಗಗನ ಜಗಲಿಯ ಗುಡಿಸಿ,
ಮಳೆಯ ಬಿಲ್ಲಿನ ಪುಡಿಯ ಮುಗಿಲ ರಂಗೋಲಿಯನು
ಜಗವ ಮೋಹಿಸುವಂತೆ ಹಗುರಾಗಿ ಸಿಂಗರಿಸಿ,
ಸೂರ್ಯದೇವನ ರಾಣಿ ಪೂರ್ವದಿಗ್ ದ್ವಾರದಲಿ
ನಿಂತಿರುವಳದೊ ತಾನೆ ಮಂಗಳಾರತಿಯಾಗಿ,
ಶೃಂಗಾರ ರತಿಯಾಗಿ,ಸೌಂದರ್ಯ ಕೃತಿಯಾಗಿ, ದಿವಸ ಪತಿಗಾಗಿ!

ನಿದ್ದೆ ಸಾಕೆದ್ದೇಳೊ, ನನ್ನ ಮುದ್ದು ಕಂದಯ್ಯ;
ಹೊದ್ದ ಕತ್ತಲೆಯೊದ್ದು ಬೆಳಗೇಳುತಿದೆ ನೋಡೊ,
ಮುದ್ದು ಕಂದಯ್ಯ!

ಇರುಳು ಬಾನಿಂದಿಳಿದು ಗಿರಿಯ ನೆತ್ತಿಗೆ ಬಂದು
ಸಾನು ತಪ್ಪಲ ಸಿರಿಯ ಮೇಯುತಲೈ ತಂದು
ಕಣಿವೆ ಕಣಿವೆಯ ಸೇರಿದುಣ್ಣೆಮಂಜಿನ ಮಂದೆ
ಬಿಸಿಲ ಸಿಂಹನ ಕಿರಣ ಕೇಸರಗಳಿಗಂಜಿ,
ವೈರಿ ಕಾಣುವ ಮುಂದೆ ಓಡುವಂದದಿ ಹಂದೆ,
ಬಂದ ರೂಪಂಗೆಟ್ಟು ಬಂದ ಬಟ್ಟೆಯ ಬಿಟ್ಟು
ಹಿಂಜರಿಯುತಿದೆ ಹಿಂಜಿ, ಹೆದರಿ,
ನಾನಾ ದೆಸೆಗೆ ಕೆಟ್ಟು, ಕೆದರಿ.
ನಿದೆ ಸಾಕೆದ್ದೇಳೊ, ನನ್ನ ಮುದ್ದು ಕಂದಯ್ಯ;
ಹೊದ್ದ ಕತ್ತಲೆಯೊದ್ದು ಬೆಳಗೇಳುತಿದೆ ನೋಡೊ,
ಮುದ್ದು ಕಂದಯ್ಯ!

ಮರನೆರಲು ಗಿರಿಯೇರಿ, ಗಿರಿನೆಳಲು ದರಿಹಾರಿ,
ಬಂಡೆಯ ನೆರಳೆದ್ದು ಬಳಿಯ ಬಂಡೆಯನೇರಿ;
ಹುತ್ತ ಗೋಪುರ ನೆಳಲು ಮರನೆತ್ತಿಯನೆ ಮೀರಿ;
ಮತ್ತೆ ಹೊದೆಹೊದೆ ನೆಳಲು ರಂಗೋಲಿ ಹಸೆಯಂತೆ,
ಮುತ್ತು ಕರಿಮಣಿ ಕೋದ ಚಿತ್ರ ಝುಲ್ಲರಿಯಂತೆ,
ಅಗಲಲಾರದೆ ಇರುಳು ಹಗಲಪ್ಪಿದೋಲಂತೆ,
ಬೇಳಕು ಕತ್ತಲೆಯೆರಡೂ ಹಾಸು ಹೊಕ್ಕಾದಂತೆ
ಹುಲ್ಲಲ್ಲಿ ಕಲ್ಲಲ್ಲಿ ನೆಲದಲ್ಲಿ ಅಲ್ಲಲ್ಲಿ
ತಮ್ಪಾಯ್ತು; ಚೆಲ್ವಾಯ್ತು; ತೂಗುವುಯ್ಯಲೆಯಾಯ್ತು;
ಆನಂದ ಶಿಶುಗೊಂದು ಸಿರಿದೊಟ್ಟಿಲಾಯ್ತು.
ನಿದ್ದೆ ಸಾಕೆದ್ದೇಳೊ, ನನ್ನ ಮುದ್ದು ಕಂದಯ್ಯ;
ಹೊದ್ದ ಕತ್ತಲೆಯೊದ್ದು ಬೆಳಗೇಳುತಿದೆ ನೋಡೊ,
ಮುದು ಕಂದಯ್ಯ!

ಹೊದೆಯ ಹಕ್ಕಿಯನುಳಿದು ಜಿಂಕೆತಾಯೊಡಗೂಡಿ
ಕಾಡಂಚು ಕಟ್ಟಿದ ಹೊಳೆಯ ದಂಡೆಗೆ ಬಂದು
ರಾಸಿ ದಿಣ್ಣೆಯ ಮಳಲ ನುಣ್ಪುಹಾಸಿನ ಮೇಲೆ

ಬಾಲ ಬಿಸಿಲಿಗೆ ತನ್ನ ಮೆಯ್ಯನೊಡ್ಡಿದ ಮರಿಯ
ಮುದ್ದು ಮೆಯ್ಯನು ನೆಕ್ಕುವಕ್ಕರೆಗೆ ಹಾಲುಕ್ಕಿ
ಸೋರುತಿರಲಾ ಕೆಚ್ಚಲನೆ ಲೆಕ್ಕಿಸದೆ ನಿಂತು
ನಿನ್ನನ್ನೊ ನನ್ನನ್ನೊ ನೆನೆಯುತ್ತೆ ಬಯಸುತ್ತೆ

ಕಣ್ ನಟ್ಟು ಕಿವಿನಿಮಿರಿ ಮೈಮರೆತಿದೆ.
ಹಕ್ಕಿಯಲಿ ಕಾಡನ್ನೊ ಮೊರೆ ತೆರೆಯ ಹೊನಲನ್ನೊ
ತಾಯನ್ನೊ ತನ್ನನ್ನೊ ಮತ್ತೆ ಮರೆತೇನನ್ನೊ -
ಕಣ್‌ನಟ್ಟು ಕಿವಿನಿಮಿರಿ ಮೈಮರೆತಿದೆ.
ನಿದ್ದೆ ಸಾಕೆದ್ದೇಳೊ, ನನ್ನ ಮುದು ಕಂದಯ್ಯ;
ಹೊದ್ದ ಕತ್ತಲೆಯೊದ್ದು ಬೆಳಗೇಳುತಿದೆ ನೋಡೊ,
ಮುದ್ದುಕಂದಯ್ಯ!

ಹಕ್ಕಿಕರೆ ಹೊಳೆಯಮೊರೆ ಜಿಂಕೆಮರಿ ಕೂಡಿ
ಕಾಡಂಚು ಕಟ್ಟಿದ ಹೊಳೆಮಳಲೊಳಾಡಿ
ನಲಿದಾಡಿ ಕುಣಿದಾಡಿ ಕೂಗಾಡಲೇಳಯ್ಯ,
ಹೊತ್ತಾಯಿತೇಳಯ್ಯ, ಓ ನನ್ನ ಕಂದಯ್ಯ;
ನಿದ್ದೆ ಸಾಕೆದ್ದೇಳೊ, ನನ್ನ ಮುದ್ದು ಕಂದಯ್ಯ;
ಹೊದ್ದ ಕತ್ತಲೆಯೊದ್ದು ಬೆಳಗೇಳುತಿದೆ ನೋಡೊ,
ಮುದ್ದು ಕಂದಯ್ಯ!

## ರಸದರ್ಶಿ

ಅತ್ತ ಮುದ್ದಿನ ತನಯ,
ಇತ್ತ ಮುದ್ದಿಸುವಿನಿಯ;
ಎರಡೊಲುವುಗಳ ನಡುವೆ
ಪವಡಿಸಿಹ ಚೆಲುವೆ,
ನಿನ್ನೆದೆಯ ನಂದನದಿ
ಆನಂದ ಮಂಚದಲಿ
ಉಯ್ಯಾಲೆಯಾಡುತಿದೆ
ಸಂಸಾರ ಸಾರ!

ಹಣೆಯುದಯ ಗಿರಿಯಲ್ಲಿ
ಕುರುಳಿರುಳನೋಸರಿಸಿ
ದಳದಳಗಳರಳುತಿರೆ
ಉಷೆತಾವರೆ,
ಮೊಗದ ಮಲೆನಾಡಿನಲಿ
ಅಲೆವ ಕಣ್ಣಿನಕವಿಗೆ
ಸೊಬಗುಸೊಡರೌ ನಿನ್ನ
ಮೂಗುತಿಯ 'ಬೆಳ್ಳಿ'!

ನಿನ್ನ ಬಳೆ ಕಿಂಕಿಣಿಯೊ
ಹಕ್ಕಿಗೊರಳಿನ ದನಿಯೊ?
ಪ್ರಕೃತಿಗೇಂ ಪ್ರತಿನಿಧಿಯೊ?
ಸನ್ನಿಧಿಯೊ? ನಿಧಿಯೊ?
ನೀಂ ನಿಸರ್ಗದ ಮೂರ್ತಿ;
ಸಾಮಾನ್ಯತಾ ಕೀರ್ತಿ;
ಕವಿಗೆ ಸ್ವರ್ಗಸ್ಫೂರ್ತಿ,
ಸಹಧರ್ಮಿಣಿ!

ಅಂದು ನಾಂ ಪ್ರಕೃತಿಯಲಿ
ಮತೆ ಸಂಸ್ಕೃತಿಯಲ್ಲಿ
ಭಾವುಕ ತಪಸ್ಸಿನಲಿ
ರಸದರ್ಶಿಯಾದೆ:
ನಿನ್ನಾತ್ಮ ನಂದನದಿ
ಹರಿಯಲಾನಂದ ನದಿ
ಮಿಂದು ನಾನಿಂದೊಮ್ಮೆ
ರಸಲೀನವಾದೆ!

## ಕುಣಿಯುತ ಬಾ, ಕಂದಯ್ಯ

ಕುಣಿಯುತ ಬಾ, ಕುಣಿಯುತ ಬಾ,
ಕುಣಿಯುತ ಬಾ, ಕಂದಯ್ಯ;
ತಂದೆತಾಯಿಯರ ಕಲೆಯ ಕಣ್ ನವಿಲ

ಕುಣಿಸಿ ತಣಿಸಿ ಬಾ, ಕಂದಯ್ಯ.
ಮಲೆಯ ಅಡವಿಯಲಿ ಚಿಮ್ಮಿ ಜಿಂಕೆಮರಿ
ತನ್ನಮ್ಮನೆಡೆಗೆ ನೆಗೆವಂತೆ ಬಾ;
ಬೆಟ್ಟನೆತ್ತಿಯಿಂದುರುಳಿ ಕಲ್ಗಳಲಿ
ಸುತ್ತಿ ಸುಳಿವ ತೊರೆಯಂತೆ ಬಾ!

ಕಂಪುಸುಗ್ಗಿಯಾ ತಂಪುದೋಂಟದಲಿ
ಎಲರಿನೊಡನೆ ನಲಿವಲರಾಗಿ;
ಹೂ ತಳಿರಸೊಂಪು, ಹಕ್ಕಿಕೊರಲಿಂಪು,
ಹಡೆದವರ ಹೆಂಪು ನೀನಾಗಿ,
ಬದುಕನೊಲಿಸಿ ಬಾ, ಬಾಳ ನಲಿಸಿ ಬಾ,
ಎದೆಯನುಲಿಸಿ ಬಾ, ಕಂದಯ್ಯ;
ತಂದೆತಾಯಿಯರ ಕಲೆಯ ಕಣ್ ನವಿಲ
ಕುಣಿಸಿ ತಣಿಸಿ ಬಾ, ಕಂದಯ್ಯ!

## ಅಮೃತಕಾಗಿ

ಹಸಿವಾಗುತಿದೆ ಅಮ್ಮಾ,
ಹಲನೂಡಮ್ಮಾ:
ಕಡವರದ ತವರಿಂದೆ
ಬಡತನಕೊಲಿದು ಬಂದೆ;
ಇಂಗಡಲ ಸೊಗದಿಂದೆ
ನಿನ್ನೊಡಲಿಗಿಳಿತಂತೆ
ಒಲುಮೆ ಸೆರೆಯಾಗಿ;
ಅಮೃತದ ಕುಮಾರನಾಂ
ಕೂಗುವೆನಮೃತಕಾಗಿ!

ರೋದಿಡುವ ಈ ಬಾಯಿ,
ಅಯ್ಯೊ ಈ ಬಡಪಾಯಿ,
ಕ್ಷೀರಸಾಗರಶಾಯಿ?

ಎಂಬ ಶಂಕೆಯೆ, ತಾಯಿ?
ತಿಳಿಯಮ್ಮ ತೂಗಿ:
ನಿದ್ರಾ ಸಮುದ್ರವನೆ
ಮಥಿಸುವೆನಮೃತಕಾಗಿ!

ನಿನಗರಿದೆ ನನ್ನ ನೆಲೆ?
ನಿನಗರಿದೆ ನನ್ನ ಬೆಲೆ
ಶಿಶುವಾನು ಶಿವನ ಕಳೆ;
ಕವಿ ಕಲೆಯ ಕೀರ್ತಿ ಬೆಳೆ;
ಒಲುಮೆ ಹಣ್ಣಾಗಿ,
ಅಮೃತದ ಕುಮರನಾಂ
ಜನಿಸಿಹೆನಮೃತಕಾಗಿ!

ನನ್ನ ಬಾಳುಗಳೊಲುಮೆ
ತಣ್ಪು ಬೆಂಕಿಯ ಕುಲುಮೆ;
ರತಿನೋಂಪಿಯರಿಕಲ್ಪಿ
ಕೃತಿಯ ಸೃಜಿಸುವ ಶಿಲ್ಪಿ.
ನಿನ್ನರಕೆಗಾಗಿ,
ಅಮೃತದ ಕುಮಾರನಾಂ
ಬಂದಿಹೆನಮೃತಕಾಗಿ!

ಬಿದಿಗೆದಿಂಗಳ್‌ದೋಣಿ
ಮುಗಿಲಲೆಯನಲೆವಂತೆ,
ವರಕವಿಯ ಸುರವಾಣಿ
ಜಗದೆದೆಯ ಹೋಗುವಂತೆ,
ನಿನ್ನತಿಥಿಯಾಗಿ
ಅಮೃತದ ಕುಮಾರನಾಂ
ಬಂದಿಹೆನಮೃತಕಾಗಿ!

## ತನುಜಾತನಹುದಾತ್ಮಜಾತನುಂ

ನೀನೆಮ್ಮ ಪ್ರಾರ್ಥನೆಯ ಶಿಶು ಕಣಾ, ತೇಜಸ್ವಿ;
ಬರಿಯ ತನುಜಾತನಲ್ಲಹುದಾತ್ಮಜಾತನುಂ..
ಮೆಯ್ಯ ಭೋಗಕೆ ಮನದ ಯೋಗದ ಮುಡಿಪನಿತ್ತು
ನಮ್ಮಾಶೆ ಬಿಜಯಗಯಸಿದೆ ನಿನ್ನನೀ ಜಗಕೆ
ಪೆತ್ತು. ತನುವಿನ ಭೀಮತೆಗೆ ಮನದ ಭೂಮತೆಯೆ
ಕಾರಣಂ. ಕಾಯ ಕಾಂತಿಗೆ ತಾಯಿ ತಂದೆಯರ
ಮೆಯ್ಯ ತೇಜಂ ಮಾತ್ರಮಲ್ತಾತ್ಮದೋಜಮುಂ
ಕಾರಣಂ.

ಕವಿಯ ಬೃಹದಾಲೋಚನಾ ಸಾರಂ,
ಕವಿಕಲ್ಪನೆಯ ಮಹಾ ಭೂಮ ಭಾವಂಗಳುಂ,
ಕವಿ ಶರೀರದ ನಾಳದಲಿ ಹರಿವ ನೆತ್ತರೊಳ್
ತೇಲುತಿಹ ಸಹ್ಯಾದ್ರಿ ಪರ್ವತಾರಣ್ಯಮುಂ,
ಕವಿ ಸವಿದ ಸೂರ್ಯ ಚಂದ್ರೋದಯಸ್ತಾದಿಗಳ
ಜಾಜ್ವಲ್ಯ ಸೌಂದರ್ಯಮುಂ, ಜೀವ ದೇವರಂ
ಹುಟ್ಟು ಸಾವಂ ಸೃಷ್ಟಿಯುದ್ದೇಶಮಿತ್ಯಾದಿ
ಸಕಲಮಂ ಧ್ಯಾನಿಸಿ ಮಥಿಸಿ ಮುಟ್ಟಿಯನುಭವಿಸಿ
ಕಟ್ಟಿದ ಋಷಿಯ 'ದರ್ಶನ'ದ ರಸ ಮಹತ್ವಮುಂ,
ಪೃಥಿವಿ ಸಾಗರ ಗಗನಗಳನಪ್ಪಿ ಕವಿ ಪೀರ್ದ
ನೀಲ ಶ್ಯಾಮಲ ಭೀಮ ಮಹಿಮೆಯುಂ, ತತ್ವದಿಂ
ಕಾವ್ಯದಿಂ ವಿಜ್ಞಾನದಿಂದಂತೆ ಋಷಿಗಳಿಂ
ಕವಿಗಳಿಂದಾಚಾರ್ಯವರ್ಯರಿಂ ಪಡೆದಖಿಲ
ಸುಜ್ಞಾನ ಕೃಪೆಯುಂ ನೆರಪಿ ಪಡೆದಿಹವು ನಿನ್ನ
ವ್ಯಕ್ತಿತ್ವಮಂ: ನೀನೆಮ್ಮ ಪ್ರಾರ್ಥನೆಯ ಶಿಶು ಕಣಾ,
ತೇಜಸ್ವಿ: ತನುಜಾತನಹುದಾತ್ಮಜಾತನುಂ!

## ತನಯನಿಗೆ

ಮೂಡಿ ಬಂದಾ ಉದಯರವಿ ನೋಡು ಕಂದಾ!
ಬಿಸಿಲ ನೆವದಲಿ ಶಿವನ ಕೃಪೆಯ ತಂದ!
ಹಬ್ಬುತಿದೆ ಜಗಕೆಲ್ಲ ಹೊಂಬೆಳಕಿನಾನಂದ:
ಏನು ಚಂದಾ ಲೋಕವಿದು ಏನು ಚಂದ!

ಓಕುಳಿಯನಾಡುತಿದೆ ಕೆನೆಮುಗಿಲ ಲೋಕದಲಿ
ನಿನ್ನ ಕೆನ್ನೆಯ ಕೆಂಪು: ಕಾಣು, ಕಂದಾ!
ಜೋಗುಳವನುಲಿಯುತಿದೆ ಹಕ್ಕಿಗಳ ಹಾಡಿನಲಿ
ನಿನ್ನ ಸವಿಗೊರಲಿಂಪು: ಕೇಳು, ಕಂದಾ!

ವಿಶ್ವವೆಲ್ಲಾ ಸೇರಿ ವಿಶ್ವಾಸದಲಿ ಕೋರಿ
ಪಡೆದಂದವೀಯೊಡಲ ಚಂದ, ಕಂದಾ,
ವಿಶ್ವಾತ್ಮವನೆ ಸಾರಿ, ವಿಶ್ವದೊಲವನೆ ತೋರಿ,
ವಿಶ್ವದಾನಂದವಾಗೆನ್ನ ಕಂದಾ!

## ನಾಮಕರಣೋತ್ಸವ

ನನ್ನೀ ಅನರ್ಹತೆಯು ನಡುಗುತಿಹುದೀ ನಿನ್ನ
ಕೃಪೆಯಮೃತ ವರ್ಷಧಾರೆಯಲಿ ಮಿಂದು;
ಅರಸನೇರಲ್ ಕರೆಯೆ ತಿರುಕಿ ಕಂಪಿಸುವಂತೆ
ರತ್ನ ಸಿಂಹಾಸನದ ಕೆಲದಿ ನಿಂದು!

ಚಕ್ರಾಧಿಪತ್ಯಗಳನಾಳ್ವವರಿಗೇನಿಹುದೆ
ಕವಿಯ ಸಂತೋಷದೊಳಗೊಂದು ಬಿಂದು?
ವಿದ್ಯೆ ಕೀರ್ತಿಗಳೊಂದುಗೂಡಿದಂದದೊಳಿಂದು
ಲೋಕಕೈತಂದಿಹನು ಪೂರ್ಣ - ಇಂದು!

ಸಂದವರ ಪುಣ್ಯವೋ? ಬಂದವನ ಪುಣ್ಯವೋ?
ತಂದೆ ತಾಯಿಯರ ಪುಣ್ಯವಿದೊ, ಗುರುವೆ?
ನನ್ನ ಕೈಹಿಡಿದಾಕೆಯಾ ಬಿನ್ನಪದ ಹಣ್ಣೊ?
ಇನ್ನೇನು ಕಾರಣವೊ ಕಾಣೆ, ಓ ಗುರುವೆ!

## ಸ್ವಾಗತ ನಿನಗೆಲೆ ಕಂದಯ್ಯ

ಸ್ವಾಗತ ನಿನಗೆಲೆ ಕಂದಯ್ಯ
ನಮ್ಮೆದೆ ಬಾನಿನ ಚಂದಯ್ಯ!

ನಮ್ಮಾತ್ಮದ ಅಮೃತತ್ವದ ಬಿಂದುವೆ,
ನಮ್ಮಿಬ್ಬರ ಚಿರಸುಖರಸ ಸಿಂದುವೆ,
ಆ ಸಿಂದುವನುಕ್ಕಿಪ ಪೂರ್ಣೇಂದುವೆ,
ಸ್ವಾಗತ ನಿನಗೆಲೆ ಕಂದಯ್ಯ!
ನಮ್ಮಾತ್ಮದ ಜನ್ಮಾಂತರ ಬಂಧುವೆ,
ನಮ್ಮಿಬ್ಬರ ಕಲ್ಪಾಂತರ ಬಂಧವೆ,
ಮಂಗಳ ನಿನಗೋ ಜೀವಾನಂದವೆ,
ನಮ್ಮೆದೆ ಬಾನಿನ ಚಂದಯ್ಯ!

ಶೃಂಗಾರ ಸಾಗರ ಸಾಕ್ಷಾತ್ಕಾರ,
ಸಂಸಾರ ಪ್ರೇಮದ ನವಶೃಂಗಾರ,
ಸ್ವಾಗತ ನಿನಗೆಲೆ ಮುದ್ದು ಕುಮಾರ,
ಪೂರ್ಣ ಸುಧಾಕಾರ ತೇಜಸ್ವಿ!
ಸುಂದರ ಪೃಥ್ವಿಗೆ ಸ್ವಾಗತವಯ್ಯ,
ಪುಣ್ಯಭಾರತಕೆ ಸ್ವಾಗತವಯ್ಯ
ನನ್ನ ಕನ್ನಡಕೆ ಸ್ವಾಗತವಯ್ಯ,
ಗುರುದೇವ ಕೃಪಾ ಓಜಸ್ವಿ!

ನಾವ್ ಮರೆಯುತ್ತಿಹ ತವರೂರಿಂದೆ
ಸಾವಿನ ತೆರೆಯೋಸರಿಸುತೆ ಬಂದೆ;
ನೆನಹಿನ ಉರಿಗೋಲ್ ನೀನ್ನೈತಂದೆ
ಮುದ್ದು ಕಂದನಾ ತೆರದಿಂದೆ!
ಆ ಉರಿಮಿಹದ ಮೈ ಹೊಸತಿನ್ನೂ;
ದೇವರು ಮುತ್ತೊತ್ತಿದ ಮೊಗವಿನ್ನೂ
ರಸದೋಕುಳಿಯಾಗಿದೆ! ನೀನಿನ್ನೂ
ಸಿವಪೊರೆಗಳಚಿಲ್ಲವೊ, ತಂದೆ!

ಭೋಗಿಯೊ, ಯೋಗಿಯೊ? ಮುಕ್ತನೊ, ಬದ್ಧನೊ?
ರಾಮನೊ? ಕೃಷ್ಣನೊ? ಕ್ರಿಸ್ತನೊ? ಬುದ್ಧನೊ?
ಯಾರೋ ಬೇರೆಯ ಕವಿಯೋ ಸಿದ್ಧನೊ?
ಯಾರನು ಕಳುಹಿಸಿದನೊ ಕಾಣೆ!

ಯಾರಾದರು ಆಗದಕೇನಂತೆ?
ನಮ್ಮೊಲುಮೆಯ ಕುಡಿ ನಮಗೆಮ್ಮಂತೆ:
ಕಂದಾ, ನೀನೆಮಗಿಂಪಿನ ಸಂತೆ;
ಸಲಹುತ್ತೊಲಿವೆವೊ, ಶಿವನಾಣೆ!

ಆ ಲೋಕದ ನೆನೆದಳದಿರೊ, ಕಂದ.
ಕೀಳೇನ್? ಈ ಲೋಕವಿದೂ ಚಂದ:
ರವಿ, ಶಶಿ, ಗಗನಂ, ತಾರಾ ವೃಂದ,
ಸಾಗರ, ನದಿ, ವನ, ಗಿರಿಧಾತ್ರಿ,
ಕವಿಕೃತಿ, ಕನ್ನಡ ನುಡಿ, ನಿನ್ನಮ್ಮ,
ತಂಬೆಲರ್, ಆನ್, ಅಲರ್, ಅಂತೆಯೆ ನಮ್ಮ
ಗಾಂಧಿಜಿಯಿರುವರೊ! ಅಳದಿರೊ, ತಮ್ಮಾ,
ಕೊನೆಗಾಣವುದೋ ಈ ರಾತ್ರಿ!

ಮೂಡಲಿ ನಿನ್ನಿಂದೊಳ್ಪಿಗೆ ಕೋಡು;
ತಿಳಿಯಲಿ, ಹೊಳೆಯಲಿ, ನಮ್ಮಿ ನಾಡು;
ತೊಲಗಲಿ ಕತ್ತಲೆ, ಬತ್ತಲೆ, ಕೇಡು;
ಮಂಗಳನಾಯ್ ಲೋಕಕ್ಕೆ!

ಸ್ವಾಗತ ನಿನಗಿದೊ ಕಂದಯ್ಯಾ ಬಾ;
ಬಾಳಿಂಗಡಲಿನ ಚಂದಯ್ಯ ಬಾ;
ಶಿವನಾತ್ಮದಿ ಮಿಂದಯ್ಯ ಬಾ; ಬಾ
ಪಿತೃ ಮಾತಾ ಪ್ರಿಯ ಮೋಹಕ್ಕೆ!

ನಮ್ಮೆದೆ ಬಾನಿನ ಚಂದಯ್ಯ,
ಸ್ವಾಗತ ನಿನಗೆಲೆ ಕಂದಯ್ಯ!

## ಕುಮಾರ ಸಂಭವ

ಕೇಳ್ದೊಡನೆ ಚಿಮ್ಮಿತಾನಂದದೋಕುಳಿಬುಗ್ಗೆ
ತುಂಬಿದೆದೆ ಬಾನಲ್ಲಿ ಮಳೆಯ ಬಿಲ್ಲನು ಕಟ್ಟಿ!

ನಂದನ ವನದ ಕಲ್ಪತರು ಶಿಖರವನು ಮುಟ್ಟಿ
ಕವಿಯ ಕಲ್ಪನೆ, ಇಂದ್ರನಮರಾವತಿಗೆ ಲಗ್ಗೆ
ನುಗ್ಗಿತೆನೆ, ನೆಗೆಯುತೈರಾವತದ ಬೆನ್ನೇರಿ,
ದೇವಗಂಗೆಯ ಮಿಯುತಮೃತದ ಮಡುವನೀಂಟಿ,
ದಿಕ್ಪಾಲ ಪುರಗಳು ಚರಿಸುತೆಲ್ಲೆಯ ದಾಂಟಿ,
ಮೈಮರೆತುದೆನ್ನ ಗುರುದೇವನಂಘ್ರಿಯ ಸಾರಿ
ನಮಿಸುತೆ ಕೃತಜ್ಞತಾ ಭಕ್ತಿಯಲಿ! - ಗುರು, ನಿನ್ನ
ಕೃಪೆ ನನ್ನ ಸತಿಸುತರ ಮೇಣೆನ್ನ ಮೇಲಿರಲಿ
ಸರ್ವದಾ. ಶ್ರದ್ಧೆ ಬಳುಕದೆ ನಿತ್ಯವಾಗಿರಲಿ
ನಿನ್ನ ಮಹಿಮೆಯೊಳಮಗೆ. ಪ್ರೇಮಾಂಗಿನಿಯ ನನ್ನ
ಕುವರನಾಗಲಿ ಪೂರ್ಣಚಂದ್ರಸಮ ತೇಜಸ್ವಿ:
ಕಾಂತಿ ಶಾಂತಿಯನಿತ್ತು ನಲಿಸುವ ರಸತಸ್ವಿ!

## ಶೂನ್ಯ ಶೋಧನೆ

ನೀನು ತವರಿಗೆ ಹೋದೆ;
ನಾನೊಬ್ಬನಾದೆ:
ಹೆಬ್ಬುಲಿಯ ಬಾಯಂತೆ
ಘೋರವಾಯ್ತು;
ತಬ್ಬಲಿಯ ಕೈಯಂತೆ
ಶೂನ್ಯವಾಯ್ತು!

ನಿನ್ನ ಬಿಟ್ಟಿರಲಾರೆ,
ನನ್ನೊಲುಮೆ ನೀರೆ:
ನೀರೊಳಗೆ ಬಿದ್ದಂತೆ
ಉಸಿರು ಕಟ್ಟಿ

ಪ್ರಾಣ ತುಡಿವುದು, ಕಾಂತೆ,
ಎದೆಯ ಮೆಟ್ಟಿ!

ಹಗಲು ಇರುಳೂ ನಿನ್ನ
ನೆನೆನೆನೆದು ನನ್ನ
ಪ್ರೇಮಶೀಲಾತ್ಮ ಶಿಶು
ರೋದಿಸುತಿದೆ;
ಕೈಚಾಚಿ ಶೂನ್ಯವನೆ
ಶೋಧಿಸುತಿದೆ!

## ಪ್ರಿಯ ಸತಿಗೆ

ಸತಿ ಎಂಬ ಮಮತೆಯಲಿ ನಾ ನುತಿಸುವವನಲ್ಲ;
ಮೇಣಲ್ಲವಿದು ಪತಿಯ ಮೋಹದ ಅತಿಶಯಯೋಕ್ತಿ.
ಅನುಭವವನಾಡುವೆನು: ನೀ ದೇವತಾ ವ್ಯಕ್ತಿ.
ಕಣ್ಣು ಕೋರೈಸುವಂತಹ ಮಿಂಚಿನಂತಲ್ಲ;
ಧ್ರುವತಾರೆಯಂತೆ! ನಿಃಸ್ವಾರ್ಥೆ ಹೇ ಮಾ ಸತಿಯೆ,
ಧೀರೆ, ಸಂಯಮ ಶೀಲೆ, ರೂಪದಲಿ ಗುಣದಲ್ಲಿ
ನೀನೆ ದೇವತೆಯೆನಗೆ; ತ್ಯಾಗ ಭೋಗಗಳಲ್ಲಿ
ನೀನೆ ದಿವ್ಯಾದರ್ಶವೆನಗೆ, ಓ ಪ್ರಿಯರತಿಯೆ!

ನೀನು ಮಾವನ ಮಗಳೆ? ಗುರುಕರುಣೆಯಿತ್ತ ಕೃಪೆ:
ಅವನ ಆಶೀರ್ವಚನವೀ ಚೆಲ್ವು ರೂಪದಿಂ
ಬಂದನ್ನನೆತ್ತುತಿದೆ ಕತ್ತಲೆಯ ಕೂಪದಿಂ
ಬೆಳಕಿನೆತ್ತರಕೆ - ಎಂದೆದೆಮುಟ್ಟಿ ನಂಬಿದೆಪೆ!

ದೇವಿ, ಪ್ರತಿಭೆಗೆ ನೀನೆ ಭಾವವಿದ್ಯುಚ್ಛಕ್ತಿ;
ಕಲೆಗೆ ವಿದ್ಯಾಶಕ್ತಿ; ಪ್ರಾಣಕೆ ಪ್ರೇಮಶಕ್ತಿ!

## ಕವಿ - ಸಂಸಾರಿ

ಕರುಬಿದನು ಸಂಸಾರಿ;
ಕವಿ ನಲಿದನು!
ಹೂವಿಡಿದ ಸೂರ್ಯಕಾಂತಿಯ ಗಿಡಗಳೆಡೆಯಲ್ಲಿ
ವೈಶಾಖದುದಯ ಸೂರ್ಯನ ಕಾಂತಿಯಲ್ಲಿ
ಬೀಸಿಬಹ ಹೊತ್ತರೆಯ ತಣ್ಣನೆಯೆಲರಿನಲ್ಲಿ
ಕಣ್ಗೊಸಗೆಯಾಗುತಿರೆ, ಮನಸಿನಲ್ಲಿ
ಕರುಬಿದನು ಸಂಸಾರಿ;
ಕವಿ ನಲಿದನು!

ಹಸುರು ಗಿಡಗಳ ಹಸುರು ತೊಟ್ಟಿನ ತುದಿಗಳಲ್ಲಿ
ಹೊಚ್ಚ ಹೊಸ ಹೊನ್ನ ಹಳದಿಯ ಹೂಗಳಲ್ಲಿ
ಹಳದಿ ಸವಿ ಹೂಹುಡಿಯ ಕಿರುಹೊರೆಯ ದುಡಿವಡಿಯ
ಮೊರೆವಳಿಗಳನು ನೋಡಿ, ತೊರೆದು ನುಡಿಯ
ಕರುಬಿದನು ಸಂಸಾರಿ;
ಕವಿ ನಲಿದನು!

ಹೇಮಸುಮ ಸೌಂದರ್ಯ, ಮಕರಂದ ಮಾಧುರ್ಯ,
ಝೇಂಕರಿಸುವಾರಡಿಗಳೊಕ್ಕೊರಲಿನಿಂಪು,
ಕಲ್ಪನೆಯ ರಸದ ಭಾವದ ನೆನಹಿನೌದಾರ್ಯ,
ಸಂತೋಷ ಲಕ್ಷ್ಮಿಯಪ್ಪುಗೆಯಲಂಪುಃ
ಕರುಬಿದನು ಸಂಸಾರಿ;
ಕವಿ ನಲಿದನು!

ನನ್ನ ಮನೆಯಂಗಳದಿ ನಾ ನಟ್ಟು ನೀರ್ವೊಯ್ದು
ಬೆಳೆದ ಹೂವಿನ ಜೇನು ನನಗಿಲ್ಲವೆಂದು,
ಕಂಡವರ ಮನೆಯ ಬಂಡಾಳ್ಗಳಿಲ್ಲಿಗೆ ಬಂದು
ಕೊಂಡೊಯ್ಯುತಿಹರೆನ್ನನವರಿಗೆಂದು
ಕರುಬಿದನು ಸಂಸಾರಿ;
ಕವಿ ನಲಿದನು!

## ವಿರಹ ಚಿತೆ

ಕಣ್ಣಿನಲಿಯೆ ಬೀಳುಕೊಟ್ಟು
ಮನಸಿನಲ್ಲಿಯೆ ಮುತ್ತುಕೊಟ್ಟು
ತವರು ಮನೆಯೊಳಗವಳ ಬಿಟ್ಟು
ಮನಸಿಲ್ಲದ ಮನಸಿನಿಂದೆ
ಒಬ್ಬನೆ ಹಿಂತಿರುಗಿ ಬಂದೆ.
ಮರುಭೂಮಿಯ ಗಾಳಿಯಂತೆ
ಸುಯ್ದಲೆದಲೆದೂ
ಬಾಯಾರಿತು ವಿರಹ ಚಿಂತೆ
ದಾರಿಯುದ್ದಕೂ.

ನೆನಹಿನುರಿಯ ಬಯಲಿನಲ್ಲಿ
ಸಾಗಿತಿರುಳು ರೈಲಿನಲಿ,
ನಿದ್ದೆಯೆಲ್ಲ ಬರಿಯ ಕನಸು;
ಎದೆಯೊಳೇನೊ ಕಿಚ್ಚು, ಕಿನಿಸು.
ಯಾರ ಮೇಲೊ? ಏಕೊ? ಮುನಿಸು!
ಏನೊ ಇಲ್ಲ, ಏನೊ ಬೇಕು,
ಎಂಬ ಬಯಕೆ, ಕುದಿವು, ರೋಕು!
ಇಂತು ಸಾಗಿತು ಶನಿ ಇರುಳು;
ಅರಿಲ ಬೆಳಕು ಬಾಡಿತು;
ಚಿತೆಯಾಯಿತು ಕವಿಯ ಕರುಳು;
ಹಗಲೊ ಹೆಣವೊ ಮೂಡಿತು!

ಪ್ರೇತದಂತೆ ನಡೆದೆ ಕೊನೆಗೆ,
‘ಉದಯ ರವಿ’ ಗೆ ನಮ್ಮ ಮನೆಗೆ.
ಮನೆಯೆ? ಅಯ್ಯೊ ಬರಿಯ ಸುಳ್ಳು:
ಗೋಡೆ ಸುತ್ತಿದೊಂದು ಟೊಳ್ಳು!
ಕಿಟಕಿ, ಬಾಗಿಲು, ಕಲ್ಲು, ಮಣ್ಣು;
ಬುರುಡೆಯೆಲುಬಿಗೆ ತೂತುಗಣ್ಣು!
ಪ್ರೇಮ ಕುಣಪವಾಗಿ ನಿಂತೆ!
ಚಿತೆಯಾಗಲ್ ವಿರಹ ಚಿಂತೆ!

ನಿನ್ನ ನೆನಪೊ ಮನೆ ತುಂಬಿದೆ;
ಮನೆಯೆ ಮಾತ್ರ ನೀನಿಲ್ಲದೆ

ಸರ್ವ ಶೂನ್ಯವಾಗಿದೆಃ
ರಾಮಚಂದ್ರ, ಇಂತೆ ಕುದಿದೆ;
ಸೀತೆ ಕಳೆಯಲತ್ತು ಕರೆದೆ;
ತಿಳಿತಿಂದು ನಿನ್ನೆದೆ!

ಹೇಮಲತೆ, ಪ್ರೇಮಲಕ್ಷ್ಮಿ,
ನನ್ನ ಪಂಚ ಪ್ರಾಣಲಕ್ಷ್ಮಿ,
ಗಾಳಿ ನೀನೆ; ಬೆಳಕು ನೀನೆ;
ಉಲ್ಲಾಸದ ಉಸಿರು ನೀನೆ;
ನನಗೆ ಮನೆಗೆ ಎಲ್ಲ ನೀನೆ!
ನೀನೆ ಕವಿಗೆ ಹೃದಯ, ಭಾವ,
ಮೇಣಾತ್ಮಕೆ ರಸದ ಜೀವ!
ಗೃಹಿಣಿ, ನೀನೆ ಗೃಹದ ದೇವಿ;
ನೀನು ದೂರ ಹೋದರೆ
ಮಸಣದೊಂದು ಹಾಳುಬಾವಿ
ಗೃಹವಿದು! 'ಮನೆ' ಎಂಬರೆ?

ತಪ್ಪಲು ಗೃಹಲಕ್ಷ್ಮಿಯ ಜೊತೆ
ಒಪ್ಪಿದ ಮನೆಯೆ ವಿರಹ ಚಿತೆ!
ಹೇಮಾಂಗಿನಿ, ಪ್ರೇಮಸತಿ,
ಕಾತರನತಿ ನಿನ್ನ ಪತಿ!
ಮರುಭೂಮಿಗೆ ಅಮೃತಧಾರೆ,
ಕಗ್ಗತ್ತಲೆಗೆಸೆವ ತಾರೆ,
ನನ್ನ ಹೃದಯ ತಾಪವಾರೆ
'ಉದಯ ರವಿ'ಗೆ ಬೇಗ ಬಾರೆ!

ಏದುತ್ತಿದೆ ಪ್ರಾಣಪಕ್ಷಿ
ವಿರಹಾತಪ ತಾಪಕೆ!
ಆಶೀರ್ವಾದವಾಗಿ ಬಾ
ವಿಯೋಗದೀ ಶಾಪಕೆ!

## ಬಿನ್ನಯ್ಸಿದಳು ತಾಯಪ್ಪಳಿಂತು

ಕಳುಹಿಸು ಯೋಗ್ಯನನು,
ಹೇ ಗುರುವೇ,
ಕಳುಹಿಸು ಭಾಗ್ಯನನು,
ಶ್ರೀ ಗುರುವೇ.

ಕಳುಹಿಸು ಮಂಗಳ ಚೆಲುವನನು,
ಲೋಕವನೊಲಿವನನು;
ಬಾಳಿನ ಬವರವ ಗೆಲುವನನು,
ನಿನ್ನೊಳೆ ನಿಲುವನನು. -

ಕಳುಹು ಆವೇಶದ ಪುತ್ರನನು,
ದೇಶದ ಮಿತ್ರನನು;
ಕಳುಹು ಪವಿತ್ರ ಚರಿತ್ರನನು,
ಗೌರವ ಪಾತ್ರನನು. -

ಕಳುಹು ಕಲಾರಸ ಭಕ್ತನನು,
ಕಾವ್ಯಾಸಕ್ತನನು;
ಕನ್ನಡ ಸೇವಾ ಶಕ್ತನನು
ನಿನ್ನಡಿ ಯುಕ್ತನನು. -

ಕಳುಹು ನಿರಂಕುಶ ಮುಕ್ತನನು
ಮೌಢ್ಯ ವಿರಕ್ತನನು;
ಕಳಹು ಮನೋ ಸ್ವಾತಂತ್ರ್ಯನನು,
ಶಿವ ಪರ ತಂತ್ರನನು. -

ಕಳುಹಿಸು ನಿತ್ಯ ನವೀನನನು,
ಸತ್ಯಾಧೀನನನು;
ಮಹಿಮೆಗೆ ಮಾತ್ರವೆ ದೀನನನು,
ಕವಿ ಸಮಗಾನನನು. -

ಕೃಪೆ ಅನಂತಕೆ ಪಾತ್ರನನು,
ಪ್ರಿಯ ರುಚಿ ಗಾತ್ರನನು;
ಕಳುಹು ಸದಿಚ್ಛಾ ಸೂತ್ರನನು,
ಚೇತನ ನೇತ್ರನನು!

## ಗರ್ಭಗುಡಿ

ಬಳೆಯುತಿರೆ ದಿವ್ಯಾರ್ಭಕಂ ಗರ್ಭಗುಡಿಯಲ್ಲಿ
ನಿನ್ನ ಮೈ, ಗರ್ಭಿಣಿಯೆ, ದೇವಾಲಯಂ; ಪೂಜ್ಯೆ
ನೀನೆನಗೆ. ಓ ಲಕ್ಷ್ಮಿ, ಓ ಸೃಷ್ಟಿಸಾಮ್ರಾಜ್ಯೆ,
ನಿನ್ನ ಕರ್ಮದ ಮಹಿಮೆ ನಿನಗರಿಯದೆ: ಬಳ್ಳಿ

ಹೂ ಹಡೆವುದಲ್ತೆ? ಸಾಮಾನ್ಯಪಾಮರ ದೃಷ್ಟಿ
ಕಾಣದದರಲಿ ಕೃತಿರಹಸ್ಯದ ಪವಾಡಮಂ;
ಬ್ರಹ್ಮಶಿಲ್ಪಿಯ ಪರಮ ಕಲೆಯ ಕೈವಾಡಮಂ
ಕಂಡು ರೋಮಾಂಚ ರಸವಶನು ಕವಿ! ತವ ಸೃಷ್ಟಿ

ಕವಿಕೃತಿಗೆ ಕೀಳಲ್ಲ. ಪೇಳ್ವವಂಗರಿಯದಿರೆ
ಕೇಳ್ವ ರಸಿಕಂಗರಿಯದಿಹುದೆ ವರಕೃತಿ ಮಹಿಮೆ?
ತನ್ನ ತಾನರಿಯದು ಮಹತ್ತು, ಕೈಮುಗಿಯದಿರೆ
ಜಗತ್ತು: ರಾಮಾನುಚರನಾಂಜನೇಯಂಗುಪಮೆ!

ಪೂರ್ಣಾಂಗಿ, ತೇಜಸ್ವಿ ಪೂರ್ಣಚಂದ್ರ ಶರೀರೆ,
ಶಿವಕೃತಿ ಕಲಾರಂಗಮೆನಗೆ ನೀನ್, ಓ ನೀರೆ!

## ನನ್ನವಳು

ಹೂಗೆಂಪಿನಂಚಿನಾ
ಗಿಳಿಹಸುರು ಸೀರೆ
ತುಂಬು ಮೆಯ್ಯನು ತುಂಬಿ
ಕಣ್ಸೊಗಸಗೆ ಬೀರೆ;
ಬಿಲ್ಲೆದೆಯ ಬಾಗಿಂದೆ
ಬಾಚು ಮುಡಿ ಸೋರೆ,
ಹೆಣೆ ಜಡೆಯ ಕೈಗಳಲಿ
ಪೊನ್ಮಿಂಚು ತೋರೆ;
ಮುದ್ದು ಮೊಗದಲಿ ಮಿನುಗೆ

ಮೂಗಿನಾ ತಾರೆ,
ಚೆಲ್ವು ಚೆಂಜೇನ್ಗೆಳಸಿ
ಬಾಳು ಬಾಯಾರೆ;
ಎದೆ ನಲಿಯೆ ಮೆರೆದಳಾ
ಹದಿನಾರು ಚೈತ್ರದಾ
ನನ್ನವಳು ನೀರೆ!

ನೋಡಿದೆನು ಕಣ್ ತಣಿಯೆ:
ಕಣ್ ದಣಿಯಲಿಲ್ಲ.
ಓ ನನ್ನ ಪೆಣ್ ಮಣಿಯೆ,
ನಿನಗೆಣೆಯೆ ಇಲ್ಲ! -

ರವಿಯುದಯ? ಶಶಿಯುದಯ?
ಹೂದಿಂಗಳುದಯ?
ಕೃತಿಯ ಮದುರಸದುದಯ? –
ನೀನವಕೆ ಹೃದಯ!
ನೀನವಕೆ ಹೃದಯ!
ಕಲೆ, ಕೀರ್ತಿ, ಸಿರಿಯೆಲ್ಲ
ನೀನಲ್ಲದಿನ್ನಿಲ್ಲ;

ನೀನೆ ನನಗೆಲ್ಲ!
ಕಣ್ಗೆ ಸುಂದರಿಯಾಗಿ,
ಮನಕೆ ಮಂಗಳೆಯಾಗಿ,
ಚೆಲ್ವು ಒಳ್ಪುಗಳೆರಡು
ಬೆರೆಯುತೊಂದಾಗಿ
ಬಂದಿರುವೆ ನೀನೆನಗೆ
ಪ್ರೇಮಸತಿಯಾಗಿ:
ನಿಂದಿರುವೆ ಕಣ್ ಮುಂದೆ
ಹೇಮಲತೆಯಾಗಿ!

## ಬರಿಯ ಮೆಯ್ಯ ಹೆಮ್ಮೆ ತಪ್ಪು!

ಕಣ್ಣಿಗಲ್ಲ ಎದೆಗೆ ಚೆಲುವು,
ತರಳೆ, ತಿಳಿಯದೆ?
ಅಳಿಯಲೊಡನೆ ಹೃದಯದೊಲವು
ಚೆಲುವು ಉಳಿವುದೆ?
ಒಡಲ ಸೊಂಪು, ನುಡಿಯ ಇಂಪು,
ಕಣ್ಣು, ಮೂಗು, ಗಲ್ಲ, ಕೆನ್ನೆ,
ಒಡವೆ, ಸೀರೆ ಎಲ್ಲ , ನೀರೆ,
ಒಲುಮೆಯಿಲ್ಲದಿರಲು ಬರಿಯ
ಸಿಪ್ಪೆ! ಹೊಳ್ಳು! ಸಪ್ಪೆ! ಸೊನ್ನೆ!

ಅಡಿಯ ಸಿರಿಗೆ ಹೊನ್ನ ಗೆಜ್ಜೆ
ಸಿಂಗರದ ಕಿತಿ;
ನುಡಿಯ ಸಿರಿಗೆ ಬಗೆಯ ಬಿಜ್ಜೆ
ಕಲೆಯ ಸಂಸ್ಕೃತಿ,
ಮೆಯ್ಯ ಸಿರಿಯ ಬಹಳ ನೆಚ್ಚಿ
ಎದೆಯ ಮರೆಯ ಬೇಡ, ಹುಚ್ಚಿ!
ಚೆಲುವನೆಲ್ಲ ಕದಿಯೆ ಮುಪ್ಪು
ಒಲುಮೆಯೊಂದೆ ಬದುಕಿಗುಪ್ಪು!
ಬರಿಯ ಮೆಯ್ಯ ಹೆಮ್ಮೆ, – ತಪ್ಪು!

## ನಲ್ವಾತು

ನನ್ನ ಮನೆಯನು ಸೇರಿ
ಇದೆ ಮೊದಲನೆಯ ಸಾರಿ
ಹೋಗುತಿಹೆ ತವರೂರಿ
ಗೆನ್ನ ರಮಣಿ:
ಗುಣ್ಪಿರಲಿ ನಡೆಯಲಿ,
ನುಣ್ಪಿರಲಿ ನುಡಿಯಲ್ಲಿ,
ಸೊಂಪಿರಲಿ ಶೀಲದಲಿ,
ಚೆಲ್ವಿನ ಕಣಿ!

ನಿನ್ನ ನಡೆಯನು ನೋಡಿ
ನನ್ನ ತೂಕವ ಮಾಡಿ
ನುಡಿವರೆಲ್ಲರು ಕೂಡಿ,
ನನ್ನ ಚೆನ್ನೆ;
ಕವಿಹೃದಯ ಮಂದಿರದೆ
ದೇವಿ ನೀನೆಂದಿರದೆ
ಮಂದಿ ಮಣಿಯುವ ತೆರದೆ
ಬಾಳು, ರನ್ನೆ!

## ತೇಲಾಡಲಿ ತ್ರೈಭುವನಂ ರತ ತರಂಗದಿ!

ಅರುಣಗಿರಿಯ ಮೇಲೆ ಸ್ವರ್ಣಕಿರಣ ತತಿಯ ಪಸರಿಸಿ
ಮೂಡುತಿಹನು ಲೋಕಕರುಣ ನಯನ ಮೂರುತಿ;
ಮರೆಯುತಿಹುದು ಧರಣಿರಮೆಯ ಕರತಲದಲಿ ಸೊಗಯಿಸಿ
ಚೈತ್ರವನದ ಕುಸುಮ ಕುಲದ ಮಂಗಳಾರತಿ!

ಕೋಟಿ ಬಿಂದು ಹಿಮ ಮರೀಚಿಃ ಪ್ರಕೃತಿ ವಸನ ಜಲಮಣಿ;
ಪಕ್ಷಿ ಲಕ್ಷ ಗೀತಿಃ ಮಧುರವಾದ್ಯ ಮೇಲನ;
ಹರಿವ ಹೊಳೆಯ ಹೊನಲೋಕುಳಿಃ ರಾಗಭೋಗ ರಸಫಣಿ;
ಕಂಪಿನಲರ ತಂಪಿನೆಲರೆಃ ಪ್ರಾಣಖೇಲನ!

ಹೇಮಾಂಗಿನಿ – ಪ್ರೇಮಸತಿ, ಮಮ ಜೀವನ ಮಧುರತಿ,
ಬಾರೆ, ನೀರೆ, ಕಲಾವಿಪಿನ ಕಾಮ್ಯರಂಗದಿ
ಒಲಿವ, ಉಲಿವ, ನಲಿವ; ಬರಲಿ ವಿಸ್ಮೃತಿಯಾ ರಸಮೃತಿ!
ತೇಲಾಡಲಿ ತ್ರೈಭುವನಂ ರತ ತರಂಗದಿ!

## ‘ಬಾಳ್ವುದು!’

ಬಾಳ ಬೇವು ಬೆಲ್ಲವಹುದೆ
ನಾವು ಮುನಿದ ಮಾತ್ರದಿ?
ಅಳೆಯಲಹುದೆ, ತೂಗಲಹುದೆ,

ಕಟ್ಟಲಹುದೆ ಬಹುಜೀವರ
ಜಗಜ್ಜೀವ ನಾಟಕವನು
ನಮ್ಮ ಸುಖದ ಸೂತ್ರದಿ!

ಔಷಧಿಯಹುದೆ ರುಜೆಗೆ ರುಜೆ?
ಮುನಿಸು ಮದ್ದೆ ನೋವಿಗೆ?
ಎಲ್ಲದಕೂ ಇಹುದು ಎಲ್ಲೆ;
ಕವಿಯ ನುಡಿಯ ಕೇಳು, ನಲ್ಲೆ;
ಒಲುಮೆಯೊಂದೆ ಮಂತ್ರ, ಬಲ್ಲೆ,
ನೋವಿನ ಹೆಡೆಹಾವಿಗೆ!

ದುಃಖ ಸುಖದ ದಡದ ನಡುವೆ
ಹೊಳೆಹರಿವುದು ಬಾಳಿದು.
ಕುಳಿತು ಚೆಲುವಿನೋಡದಲ್ಲಿ,
ಒಲುಮೆ ಪಟವ ಬಿಚ್ಚಿ, ತಳ್ಳಿ,
ಕಲೆಯ ತೆಂಕಣೆಲರಿನಲ್ಲಿ
ಮುಂಬರಿವುದೆ - 'ಬಾಳ್ವುದು!'

## ರವಿಗೆ ಕವಿಯ ಸರಸ ನಿಂದೆ

ಅದೊ ಬಂದನೊಂದಿನಿತು ತಡವಿಲ್ಲ! ಓ ರವಿ,
ಕೆಲಸವಲ್ಲದೆ ಬೇರೆ ಕೆಲಸವಿಲ್ಲವೆ ನಿನಗೆ?
ಅಥವಾ ಹಿಡಿದಿದೆಯೆ ಕರ್ತವ್ಯದ ಪಿಶಾಚಿ?
ಸ್ವಾತಂತ್ರ್ಯವಿಲ್ಲದಾ ಯಂತ್ರ ಜೀವನ ಸುಡಲಿ!
ನೀನು ಬಾಹಿರನಲಾ ಸೋಮಾರಿತನವೆಂಬ
ರಸಿಕತೆಗೆ! - ರಸಿಕತೆಯೆ? ನಿನಗೆ ರಸಿಕತೆಯೆಲ್ಲಿ,
ಶ್ರಮಜೀವಿ? – ನಳಿ ತೋಳ್ ಸೆರೆಯೊಳಪ್ಪಿ, ತಡಮಾಡಿ
ಕಳುಹುವಾ ನಲ್ಲೆಯಿಲ್ಲವೆ ನಿನಗೆ? ಅಥವಾ
ಬರಿ ಬಣಗು ಬ್ರಹ್ಮಚಾರಿಯೊ ನೀನು? ಹಾಗಿದ್ದರೆ,
ಬುದ್ಧಿ ಹೇಳುವೆ ಕೇಳು: ಬೇಗನೆ ಮದುವೆಯಾಗು!
ಉಷೆಯ ಊರೊಳು ಇನಿತು ತಳುವಿ ಬರಬಹುದಂತೆ! -

ಕವಿ, ಮೊದಲು, (ಮದುವೆಯಾಗುವ ಮೊದಲು,) ನಿನ್ನನಾ
ಗಿರಿಶಿಖರದಲಿ ಇದಿರುಗೊಳುತಿದ್ದನ್; ಇಂದೇಕೆ
ತಳುವಿದನು? ಎಂದು ಕಿಟಕಿಯೊಳಿಣಿಕಿ ನೋಡುವೆಯಾ
ಕೋಣೆಯನು? ಚೀ ನಿನ್ನ ನಾಣಿಲಿತನಕೆ ಬೆಂಕಿ!
ಆವಾವ ವೇಷದಲಿ, ಆವಾವ ರೂಪದಲಿ,
ಆರಾರು ಆರೊಡನೆ ಎಂತು ಎಂತಿಹರೆಂದು
ಆವುದನು ಲೆಕ್ಕಿಸದೆ ಕಂಡಿಯಲಿ ಬಂದಿಣಿಕಿ
ನೋಡುವರೆ? – ನೋಡುವರೆ ನಿನ್ನಂಥ ದೊಡ್ಡವರು?
ನಿನ್ನ ಹಿರಿಮೆಗಿದು ತಕ್ಕುದೆ ಹೇಳು! - ಹೋಗಾಚೆ!
ಮುಚ್ಚಿದರವಿಂದದಲರನು ಬಿಚ್ಚು. ನಾನೊಲ್ಲೆ;
ನಮ್ಮೆಪ್ಪುಗೆಯೆ ತಾವರೆಯ ಸಿರಿಯ ತೋಳ್ಸೆರೆಯ
ಮೊಗ್ಗನಲರಿಸಲೊಲ್ಲೆ! - ನಿದ್ದೆಯಿಲ್ಲದ ನಲ್ಲೆ
ಬಳಲಿ ಮಲಗಿಹಳೊ! ಎಚ್ಚರಿಸದಿರ್; ಎಚ್ಚರಿಕೆ!
ಮತ್ತೆಲ್ಲಿಯಾದರೂ ನನ್ನ ನಿನ್ನಯ ನೇಹ
ಕೆಟ್ಟೀತು! ಬಿರುಕು ಬಿಟ್ಟೀತು! ಸುಟ್ಟುರಿದೀತು!....
ಶುದ್ಧ ಭಂಡನೊ ನೀನು! ಎಷ್ಟು ಹೇಳಿದರೇನು?
ಮತ್ತೆ ಮತ್ತೆಯು ಹೊಳಪನುಕ್ಕಿಸಿ ನಗುವೆಯೇನು?

## ಹೋಗಿ ಬರುವೆನು

ನನ್ನ ಜೀವನ ಕಲ್ಪತರುವೆ,
ನನ್ನ ತೃಷ್ಣೆಯ ಅಮೃತಸರಪೆ,
ಹೋಗಿ ಬರುವೆ; ಬೇಗ ಬರುವೆ;
ಬೆಚ್ಚ ಮುತ್ತನಂತೆ ತರುವೆ!

ಕಣ್ಣತಾವರೆ ತೊಯ್ಯದಿರಲಿ;
ಮುಡಿಯ ಮಲ್ಲಿಗೆ ಸೊರಗದಿರಲಿ;
ತುಟಿಯ ಚೆಂಜೇನಾರದಿರಲಿ;
ಬಂದೆ ಬರುವೆನು, ಏನೆಯಿರಲಿ!

ಮುಗಿಲನುಳಿಯುವ ಮಿಂಚು ಎಂತು
ಮರಳಿ ಸೇರ್ವುದು ಮುಗಿಲನಂತು
ಮತ್ತೆ ನಿನ್ನೆಡೆ ಬಂದು ನಿಂತು
ಮುತ್ತು ಕೊಡುವೆನು – ಇಂತು, ಇಂತು!

## ಲಲ್ಲೆ

ನನ್ನ ಚೆನ್ನದ ಚೆಲುವೆ,
ನನ್ನ ಹೂವಿನ ಒಲವೆ,
ನನ್ನ ಪುಣ್ಯದ ಫಲವೆ,
ದೂರವೇತಕೆ ನಿಲುವೆ?
ಹತ್ತಿರಕೆ ಬಾ!

ರತಿಪತಿಯ ಹಣೆಗಣ್ಣೆ,
ರಸದ ಬಾಳೆಯ ಹಣ್ಣೆ,
ಹಾಲು ಜೇನಿನ ಬೆಣ್ಣೆ,
ಮಲೆಯ ಮೋಹದ ಹೆಣ್ಣೆ,
ತೋಳ್ಸೆರೆಗೆ ಬಾ!

ತುಟಿಗೆ ತುಟಿ ಮುತ್ತಿಟ್ಟು,
ಎದೆಗೆ ಎದೆಯೊತ್ತಿಟ್ಟು,
ಆತ್ಮಕಾತ್ಮದ ಗುಟ್ಟು
ಹೊಳೆವಂತೆ ಬಿಗಿ ಕಟ್ಟು:
ಬಾ, ಬೇಗ ಬಾ!

## ಮೂಕವಾಗಿಹುದೇಕೆ ಕವಿಯ ವಾಣಿ

"ಮೂಕವಾಗಿಹುದೇಕೆ
ಕವಿಯ ವಾಣಿ?"

“ಮನೆಗೆ ಬಂದಿಹಳವನ
ಇನಿಯ ರಾಣಿ:

“ಪಾನಗೈಯುವ ಮುನ್ನ
ಹೂವ ಸಾರಿ
ಗಾನಗೈವುದು ದುಂಬಿ
ರಸವ ಕೋರಿ;

“ಹೂವೊಲಿದು ತೆರೆಯಲ್ಕೆ
ಸೊದೆಯ ತೋರಿ,
ಝೇಂಕೃತಿಯ ನಿಲ್ಲಿಸದೆ
ಜೇನ ಹೀರಿ?”

## ಪ್ರಥಮ ವಿರಹ

ನೀನು ಬಳಿಯಿರೆ ಹೊತ್ತು ಹರಿಯುವುದು ಹೊನಲಾಗಿ
ಕುಣಿಕುಣಿದು ನಲಿನಲಿದು ನೊರೆನಗೆಯ ಬೀರಿ;
ನೀನಿಲ್ಲದಿರೆ ಕಾಲ ನಿಲ್ಲುವುದು ಕಲ್ಲಾಗಿ
ಭಾರದಿಂದೆದೆಯ ಜೀವವ ಹಿಂಡಿ ಹೀರಿ!

ನೀನು ಬಳಿಯಿರೆ ಬಾಳ ಕೊಳ ತುಳುಕುವುದು ತುಂಬಿ
ನಲ್ ಸೊಗದ ತಾವರೆಯ ನೂರು ಹೂವರಳಿ;
ನೀನಿಲ್ಲದಿರೆ ಬದುಕು ಶೂನ್ಯತೆಯ ಸುಳಿಯಲಿ
ಹೊರಳುರುಳಿ ಕಂತುವುದುಸಿರ್ ಕಟ್ಟಿ ಕೆರಳಿ

ನೀನೆನ್ನ ಬಳಿಯಿರಲು ರವಿಯುದಯ ಬಲುಸೊಗಸು;
ನಿನ್ನ ಸೋಂಕಿರೆ ಸೊಗಸು ಕಾಂತಾರವೀಚಿ;
ನಿನ್ನ ಜೇನ್ದನಿ ಸೇರೆ ಹಕ್ಕಿಗೊರಲಿಂಚರಕೆ
ನಂದನದ ಗಾನ ಮೈಗೆರೆಯುವುದು ನಾಚಿ.

ನೀನು ಬಳಿಯಿಲ್ಲದಿರೆ, ಓ ನಲ್ಲೆ ಹೇಮಾಕ್ಷಿ,
ಜಗವೆಲ್ಲ ಜಡಬಂಡೆ, ಬೇಸರದ ಬೀಡು!

ನೀನಗಲಿದೀ ಕವಿಗೆ ಇಂದು ಈ ಮಲೆನಾಡು,
(ಹೇಳೆ ನಾಚಿಗೆಗೇಡು) ಹಿರಿಮರಳುಗಾಡು!

## ಓ ತೃಷಿತ ಚಂಚರೀಕ

ಓ ತೃಷಿತ ಚಂಚರೀಕ,
ಬಾರ, ಹೃದಯಪುಂಡರೀಕ
ನಿನ್ನನರಳಿ ಕಾದಿದೆ!
ಎದೆಯ ತುಂಬ ಮಧುವನಿಟ್ಟು
ದಾರಿಯೆಡೆಗೆ ದಿಟ್ಟಿಯಿಟ್ಟು
ಬಯಸಿ ನೋಡಿ ಕಾದಿದೆ!

ಉದಯ ಅಚಲದಲಿ ರವಿ
ಬರುವ ಚೆಹ್ನೆಯರುಣ ಛವಿ
ಓಕುಳಿಯನೆ ಚೆಲ್ಲಿದೆ!
ಸರೋವರದ ಸಲಿಲ ಮುಖತೆ,
ಪ್ರಿಯಜನರಾ ಪ್ರೇಮಸುಖಕೆ,
ಓಕುಳಿಯನೆ ಚೆಲ್ಲಿದೆ!

ಮೂಡಣೆಲರು ತೀಡುತಿದೆ;
ಕೆರೆಯ ನೀರು ನಡುಗುತಿದೆ;
ಹೂ ಬಟ್ಟಲು ಬಳುಕಿದೆ.
ಮಧುಭಾರಕೆ ಪದುಮ ಪಾತ್ರೆ
ಪೂರ್ವ ಪಶ್ಚಿಮಕ್ಕೆ ಯಾತ್ರೆ:
ಮಕರಂದವೊ? ತುಳುಕಿದೆ!

ಬಾರ ಬೇಗ ಚಂಚರೀಕ,
ಬಾರ, ಹೃದಯಪುಂಡರೀಕ
ಹಂಬಲಿಸಿದೆ ನಿನ್ನನೆ.
ಬೇಗ ಹಿಂಡಿ ಹೀರು ನನ್ನ
ಜೇನು ಸೋರಿ ಹೋಹ ಮುನ್ನ,
ಪ್ರೇಮ ಪಾನ ಧನ್ಯನೆ!